# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ಎಂ.ಎಸ್. ವಿಕಾಸ್

ದಾವಣಗೆರೆ
ಗುರುವಾರ, ಜೂನ್ 13, 2024

ಸಂಪುಟ : 51 ಸಂಚಿಕೆ : 30 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com






ದಶಮಾನೋತ್ಸವದ ಪ್ರಯುಕ್ತ ನಮ್ಮಲ್ಲಿ ನಡೆದ ಲಕ್ಕಿಡಿಪ್ ವಿಜೇತರು

ವಿಜಯಲಕ್ಷ್ಮಿ ರೋಡ್, ದಾವಣಗೆರೆ. ಫೋನ್ : 08192 234451 ಮೊ. : 9148998011

1st Price Nagarathna, Jarikatte. - 18850
2nd Price Ravi, Harihara. - 18843
3rd Price Rekha, Davangere - 23276
4th Price Naveen Shivamurthy - 19907
5th Price Maqbul, Davangere - 23900
6th Price Paramesh Naik, Bharamasagara - 12936
7th Price Jyothi Bai, Davangere - 28035
8th Price Drakshayani S., Myalara - 19249
9th Price D.M. Sanvi, Kotturu. - 28194
10th Price Chethan C., Davangere - 19336
11th Price Ranjith, Davangere - 30701
12th Price Saroja, Davangere - 18127
13th Price Vani M., Davangere - 1616
14th Price Kouti Sharada, HB Halli - 17340
15th Price Komala Bai, Davangere - 12763
16th Price Rathanamma, HB Halli - 9621
17th Price Puttappa, C.K. Halli - 31975
18th Price Sharadha Rattihalli - 16672
19th Price Devendrappa, Hovinahadagali - 10627
20th Price Anappa Naik, Kokkanuru - 22233
21st Price Sharadha, Davangere - 22315
22nd Price Pushpa, Davangere - 23212
23rd Price Shashikala, Davangere - 3518
24th Price Shakunthala, Davangere - 23901
25th Price Rekha P. Hospete - 31625


## ಪೋಕ್ಸೋ ಪ್ರಕರಣ ಯಡಿಯೂರಪ್ಪಗೆ ನೋಟಿಸ್




ಬೆಂಗಳೂರು, ಜೂ. 12 – ಬಿಜೆಪಿ ನಾಯಕ ಬಿ.ಎಸ್. ಯಡಿಯೂರಪ್ಪಗೆ ಪೋಕ್ಸೋ ಪ್ರಕರಣಕ್ಕೆ ಸಂಬಂಧಿಸಿದಂತೆ ನೋಟಿಸ್ ಕಳಿಸಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಯಡಿಯೂರಪ್ಪ ಪ್ರಸಕ್ತ ದೆಹಲಿಯಲ್ಲಿದ್ದಾರೆ. ವಾಪಸ್ಸಾದ ನಂತರ ಅವರು ತನಿಖೆಗೆ ಹಾಜರಾಗಲಿದ್ದಾರೆ ಎಂದು ಅವರ ನಿಕಟವರ್ತಿಗಳು ತಿಳಿಸಿದ್ದಾರೆ. 17 ವರ್ಷದ ಬಾಲಕಿಯ ತಾಯಿ ದಾಖಲಿಸಿದ್ದ ದೂರಿನ ಅನ್ವಯ ಯಡಿಯೂರಪ್ಪ ವಿರುದ್ಧ ಪೋಕ್ಸೋ ಪ್ರಕರಣ ದಾಖಲಿಸಲಾಗಿತ್ತು. ಈ ಬಗ್ಗೆ ಸಿ.ಐ.ಡಿ. ತನಿಖೆ ನಡೆಸುತ್ತಿದೆ.

ಯಡಿಯೂರಪ್ಪ ವಿರುದ್ಧ ದೂರು ನೀಡಿದ್ದ 54 ವರ್ಷದ ಮಹಿಳೆ, ಕಳೆದ ತಿಂಗಳು ಕ್ಯಾನ್ಸರ್ ಕಾರಣದಿಂದ ಖಾಸಗಿ (2ನೇ ಪುಟಕ್ಕೆ)

## ಪ್ರಜ್ವಲ್ ರೇವಣ್ಣ ಎಸ್.ಐ.ಟಿ. ಕಸ್ಟಡಿಗೆ



ಬೆಂಗಳೂರು, ಜೂ. 12 – ಲೈಂಗಿಕ ದೌರ್ಜನ್ಯ ಹಾಗೂ ಪೆನ್‌ಡ್ರೈವ್ ಪ್ರಕರಣದಲ್ಲಿ ಸಿಲುಕಿರುವ ಪ್ರಜ್ವಲ್ ರೇವಣ್ಣ ಕಸ್ಟಡಿಯನ್ನು ವಿಸ್ತರಿಸಲಾಗಿದೆ. ಜೂನ್ 18ರವರೆಗೆ ಆರೋಪಿಯನ್ನು ವಿಶೇಷ ತನಿಖಾ ತಂಡದ ವಶಕ್ಕೆ ನೀಡಲಾಗಿದೆ. (2ನೇ ಪುಟಕ್ಕೆ)

## ದರ್ಶನ್ ಪ್ರಕರಣದಲ್ಲಿ ಇನ್ನೂ ನಾಲ್ವರು ಆರೋಪಿಗಳು

ಬೆಂಗಳೂರು, ಜೂ. 12 – ಚಿತ್ರದುರ್ಗದ ರೇಣುಕಸ್ವಾಮಿ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ತನಿಖೆ ಚುರುಕುಗೊಳಿಸಿದ್ದು, ಪ್ರಮುಖ ಆರೋಪಿ ನಟ ದರ್ಶನ್ ಮತ್ತಿತರರನ್ನು ಘಟನಾ ಸ್ಥಳಕ್ಕೆ ಕರೆದೊಯ್ದು ಸ್ಥಳ ಮಹಜರು ಮಾಡಿದ್ದಾರೆ.

ಘಟನೆ ನಡೆದ ಪಟ್ಟಣಗೆರೆಗೆ ದರ್ಶನ್, ಅವರ ಗೆಳತಿ ಪವಿತ್ರ ಗೌಡ ಹಾಗೂ 11 ಆರೋಪಿಗಳನ್ನು ಕರೆದೊಯ್ಯಲಾಗಿತ್ತು. ಈ ಪ್ರಕರಣದಲ್ಲಿ ಆರೋಪಿಗಳ ಸಂಖ್ಯೆ 17ಕ್ಕೆ ಏರಿಕೆಯಾಗಿದೆ. ಇನ್ನೂ ನಾಲ್ವರನ್ನು ಶೋಧಿಸುತ್ತಿರುವುದಾಗಿ ಪೊಲೀಸರು ಹೇಳಿದ್ದಾರೆ. (2ನೇ ಪುಟಕ್ಕೆ)

## ಹೆಚ್‌ಡಿಕೆ ಜೆಡಿಎಸ್ ರಾಜ್ಯಾಧ್ಯಕ್ಷ ಸ್ಥಾನ ತೆರವು



ಬೆಂಗಳೂರು, ಜೂ. 12 - ಕೇಂದ್ರ ಸಂಪುಟದಲ್ಲಿನ ಕಾರ್ಯಭಾರದ ಹಿನ್ನೆಲೆಯಲ್ಲಿ ಹೆಚ್.ಡಿ.ಕುಮಾರಸ್ವಾಮಿ ಅವರು ಜೆಡಿಎಸ್ ರಾಜ್ಯಾಧ್ಯಕ್ಷ ಸ್ಥಾನ ತೆರವುಗೊಳಿಸಲಿದ್ದಾರೆ.

ಅಷ್ಟೇ ಅಲ್ಲ, ಮಂಡ್ಯದಿಂದ ಲೋಕಸಭೆಗೆ ಆಯ್ಕೆಗೊಂಡಿ ರುವುದರಿಂದ ಅವರು ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಶಾಸಕ ಸ್ಥಾನಕ್ಕೂ ಇನ್ನು ಎರಡು ದಿನಗಳೊಳಗಾಗಿ ರಾಜೀನಾಮೆ ನೀಡಬೇಕಾಗಿದೆ.

ಶಾಸಕ ಸ್ಥಾನ ತೆರವಾದ ಬೆನ್ನಲ್ಲೇ ವಿಧಾನಸಭೆಯಲ್ಲಿ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕತ್ವವೂ ತೆರವಾಗಲಿದ್ದು, ಆ ಸ್ಥಾನಕ್ಕೆ ಶಾಸಕರ ಸಭೆ ಕರೆದು ನಾಯಕನ ಆಯ್ಕೆ ಮಾಡಬೇಕಿದೆ.

ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕರಾಗಿ ಹಿರಿಯ ಸದಸ್ಯ ಜಿ.ಟಿ.ದೇವೇಗೌಡರನ್ನು ನೇಮಿಸುವ ಬಗ್ಗೆ ಚರ್ಚೆ ನಡೆದಿದೆ, ಆದರೆ, ಅವರು ಈಗಾಗಲೇ ಪಕ್ಷದ ಕೋರ್ ಕಮಿಟಿ ಅಧ್ಯಕ್ಷರಾಗಿದ್ದಾರೆ.

ದೇವೇಗೌಡರನ್ನು ಹೊರತುಪಡಿಸಿದರೆ ಹೆಚ್. (2ನೇ ಪುಟಕ್ಕೆ)

## ಕೈಗಾರಿಕಾ ಬೆಳವಣಿಗೆ ಶೇ.5ಕ್ಕೆ ಇಳಿಕೆ

ನವದೆಹಲಿ, ಜೂ. 12 -ಕಳೆದ ಏಪ್ರಿಲ್‌ನಲ್ಲಿ ಕೈಗಾರಿಕಾ ಉತ್ಪನ್ನ ಬೆಳವಣಿಗೆ ಶೇ.5ರಷ್ಟಿದೆ. ಇದು ಮೂರು ತಿಂಗಳಲ್ಲೇ ಅತಿ ಕಡಿಮೆಯಾಗಿದೆ. ಮಾರ್ಚ್ ತಿಂಗಳಲ್ಲಿ ಬೆಳವಣಿಗೆ ದರ ಶೇ.5.4 ಹಾಗೂ ಫೆಬ್ರವರಿಯಲ್ಲಿ ಶೇ.5.6ರಷ್ಟಿತ್ತು. ಜನವರಿಯಲ್ಲಿ ಕೈಗಾರಿಕಾ ಬೆಳವಣಿಗೆ ದರ ಅತಿ ಕಡಿಮೆ ಶೇ.4.2ರಷ್ಟಿತ್ತು.

# ರಾಜ್ಯ ಸರ್ಕಾರಿ ನೌಕರರಿಗೆ ಇಂದು ಸಿಹಿ ಸುದ್ದಿ ನಿರೀಕ್ಷೆ

**ಏಳನೇ ವೇತನ ಆಯೋಗ ವರದಿ**

ಬೆಂಗಳೂರು, ಜೂ. 12 - ರಾಜ್ಯ ಸರ್ಕಾರಿ ನೌಕರರ ಸಮುದಾಯಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ನಾಳೆ ಸಿಹಿ ಸುದ್ದಿ ನೀಡುವ ನಿರೀಕ್ಷೆ ಇದೆ.

ಏಳನೇ ರಾಜ್ಯ ವೇತನ ಆಯೋಗದ ಶಿಫಾರಸ್ಸಿನಂತೆ ವೇತನ ಭತ್ಯೆ ಹಾಗೂ ಸೌಲಭ್ಯಗಳ ಪರಿಷ್ಕರಣೆ ಮಾಡುವ ಸಂಬಂಧ ನಾಳೆ ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ಮಹತ್ವದ ತೀರ್ಮಾನ ತೆಗೆದುಕೊಳ್ಳುವ ಸಾಧ್ಯತೆ ಇದೆ.

ಸಚಿವ ಸಂಪುಟದ ಕಾರ್ಯಸೂಚಿಯ ಮೊದಲ ಪಟ್ಟಿಯಲ್ಲಿ ಈ ಬಗ್ಗೆ ಪ್ರಸ್ತಾಪ ಮಾಡಿಲ್ಲ, ಆದರೆ ಸಭೆ ಸೇರುವುದಕ್ಕೂ ಮುನ್ನ ಹೆಚ್ಚುವರಿಯಾಗಿ ಬರುವ ಕಾರ್ಯಸೂಚಿಯಲ್ಲಿ ಈ ವಿಷಯ ಸೇರ್ಪಡೆಯಾಗಲಿದೆ ಎಂದು ಉನ್ನತ ಮೂಲಗಳು ತಿಳಿಸಿವೆ.

ಶೇಕಡ 8ರಿಂದ 10.5ರಷ್ಟು ವೇತನ ಹೆಚ್ಚಳ ಮಾಡುವ ನಿರೀಕ್ಷೆಯನ್ನು ನೌಕರ ವೃಂದ ಇಟ್ಟುಕೊಂಡಿದೆ.

ಲೋಕಸಭಾ ಚುನಾವಣಾ ನೀತಿ ಸಂಹಿತೆ ಘೋಷಣೆ ಆಗುವ ಮುನ್ನ ಸಲ್ಲಿಕೆಯಾಗಿದ್ದ 7ನೇ ವೇತನ ಆಯೋಗದ ಶಿಫಾರಸುಗಳನ್ನು ಸ್ವೀಕರಿಸಿದ್ದ ಮುಖ್ಯಮಂತ್ರಿ ಅವರು, ಕೂಲಂಕುಶವಾಗಿ ಅಧ್ಯಯನ ಮಾಡಿ ವರದಿ ನೀಡಲು ಹಣಕಾಸು ಇಲಾಖೆಗೆ ಸೂಚಿಸಿದ್ದರು.

ತನ್ನ ಸರ್ಕಾರಿ ನೌಕರರಿಗೆ 7ನೇ ವೇತನ ಆಯೋಗ ಶಿಫಾರಸ್ಸು ಜಾರಿಗೊಳಿಸಲು ಮುಖ್ಯಮಂತ್ರಿ ಅವರು ಮುಂಗಡ ಪತ್ರದಲ್ಲಿ 15,431 ಕೋಟಿ ರೂ. ಮೀಸಲಿರಿಸಿದ್ದಾರೆ.

ಇದರ ಆಧಾರದ ಮೇಲೆ ಹಣಕಾಸು ಇಲಾಖೆ ಆಯೋಗ ಮಾಡಿರುವ ಶೇಕಡ 27.5ರ ಶಿಫಾರಸ್ಸಿನ ಬದಲು ಶೇಕಡ 25ರಷ್ಟು ಏರಿಕೆಗೆ ಶಿಫಾರಸ್ಸು ಮಾಡಿದೆ ಎಂದು ಹೇಳಲಾಗಿದೆ.

ಬಸವರಾಜ ಬೊಮ್ಮಾಯಿ ಅಧಿಕಾರದಿಂದ ಕೆಳಗಿಳಿಯುವುದಕ್ಕೂ ಮುನ್ನ ಶೇಕಡ 17ರಷ್ಟು ಮಧ್ಯಂತರ ವೇತನ ಹೆಚ್ಚಳ ಮಾಡಿದ್ದರು. ಇನ್ನು ಹಾಲಿ ಸರ್ಕಾರ ಉಳಿದ ಶೇಕಡ 8.5ರಷ್ಟು ಹೆಚ್ಚಳ ಮಾಡಬೇಕಿದೆ.

ಕಳೆದ ಮಾರ್ಚ್ 16ರಂದು ಆಯೋಗ ನೀಡಿದ ಶಿಫಾರಸ್ಸಿನಂತೆ ಸರ್ಕಾರಿ ನೌಕರರಿಗೆ ಶೇಕಡ 31ರಷ್ಟು ತುಟ್ಟಿ ಭತ್ಯೆ ವಿಲೀನಗೊಳಿಸಿ ಶೇಕಡ 27.50 ಫಿಟ್‌ಮೆಂಟ್ ನೀಡುವ ಮೂಲಕ ಕನಿಷ್ಠ ಮೂಲವೇತನವನ್ನು 10,000 ರೂ.ಗಳಷ್ಟು ಏರಿಕೆ ಮಾಡಲು ಸಲಹೆ ನೀಡಿತ್ತು.

ಕನಿಷ್ಠ ಮೂಲವೇತನ 17 ಸಾವಿರ ರೂ.ಗಳಿಂದ 27 ಸಾವಿರ ರೂ.ಗೆ ಏರಿಕೆ (2ನೇ ಪುಟಕ್ಕೆ)

## ವಿದ್ಯುತ್ ನಿಗಮ ಹುದ್ದೆಗಳ ಪರೀಕ್ಷೆ ಅಂತಿಮ ಅಂಕಪಟ್ಟಿ ಪ್ರಕಟ

ಬೆಂಗಳೂರು, ಜೂ. 12 - ಕರ್ನಾಟಕ ವಿದ್ಯುತ್ ನಿಗಮದಲ್ಲಿನ (ಕೆಪಿಸಿಎಲ್) 622 ಖಾಲಿ ಹುದ್ದೆಗಳ ಭರ್ತಿಗೆ ಫೆಬ್ರವರಿ 18ರಂದು ನಡೆಸಲಾಗಿದ್ದ ಸ್ಪರ್ಧಾತ್ಮಕ ಪರೀಕ್ಷೆಯ ಅಂತಿಮ ಅಂಕಪಟ್ಟಿಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರವು (ಕೆಇಎ) ತನ್ನ ವೆಬ್‌ಸೈಟ್‌ನಲ್ಲಿ ಇಂದು ಪ್ರಕಟಿಸಿದೆ.

ಆಕ್ಷೇಪಣೆಗಳ ಪರಿಶೀಲನೆ ನಂತರ, ಕಳೆದ ಬಾರಿಯಂತೆಯೇ ಈ ಬಾರಿಯೂ, ಪ್ರತಿ ತಪ್ಪು ಉತ್ತರಕ್ಕೆ 1/3ರಷ್ಟು ನಕಾರಾತ್ಮಕ ಅಂಕ ಕಡಿತಗೊಳಿಸಿ ಅಂತಿಮ ಅಂಕಪಟ್ಟಿ ಸಿದ್ಧಪಡಿಸುವಂತೆ ಕೆಪಿಸಿಎಲ್ ಸಂಸ್ಥೆ ಲಿಖಿತ ರೂಪದಲ್ಲಿ ಸೂಚಿಸಿತ್ತು.

ಆ ಪ್ರಕಾರ, ಹುದ್ದೇವಾರು ಪರೀಕ್ಷೆ ಬರೆದ ಅಭ್ಯರ್ಥಿಗಳ ಅಂತಿಮ ಅಂಕಪಟ್ಟಿ ಸಿದ್ಧಪಡಿಸಲಾಗಿದೆ ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. (2ನೇ ಪುಟಕ್ಕೆ)

## ನೀಟ್ : 63 ಅಭ್ಯರ್ಥಿಗಳಿಂದ ಅಕ್ರಮ

ನವದೆಹಲಿ, ಜೂ. 12 – ವೈದ್ಯಕೀಯ ಪ್ರವೇಶಕ್ಕೆ ನಡೆಸುವ ನೀಟ್ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಅಕ್ರಮ ಎಸಗಿದ 63 ಪ್ರಕರಣಗಳು ಕಂಡು ಬಂದಿವೆ. ಈ ಪೈಕಿ 23 ಅಭ್ಯರ್ಥಿಗಳನ್ನು ಡಿಬಾರ್ ಮಾಡಲಾಗಿದೆ ಎಂದು ಎನ್.ಟಿ.ಎ. ಅಧಿಕಾರಿಗಳು ಹೇಳಿದ್ದಾರೆ.

ಆದರೆ, ಪ್ರಶ್ನೆಪತ್ರಿಕೆಯ ಸೋರಿಕೆಯಾಗಿಲ್ಲ ಎಂದು ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯ ಅಧಿಕಾರಿಗಳು ಮತ್ತೊಮ್ಮೆ ಸ್ಪಷ್ಟಪಡಿಸಿದ್ದಾರೆ.

ಅಕ್ರಮ ಎಸಗಿದ ಉಳಿದ 40 ಅಭ್ಯರ್ಥಿಗಳ ಫಲಿತಾಂಶವನ್ನು ತಡೆಯಲಾಗಿದೆ ಎಂದು ಎನ್.ಟಿ.ಎ. ಪ್ರಧಾನ ನಿರ್ದೇಶಕ ಸುಬೋಧ್ ಕುಮಾರ್ ಸಿಂಗ್ ಹೇಳಿದ್ದಾರೆ.



ಚಿತ್ರ : ಜಿಗಳಿ ಪ್ರಕಾಶ್

### ಬಿತ್ತನೆ ಚುರುಕು...

ಕಳೆದೆರಡು ದಿನಗಳಿಂದ ಮುಂಗಾರು ಪೂರ್ವ ಮಳೆ ಬಿಡುವು ನೀಡಿರುವುದರಿಂದ ಮಳೆಯಾಶ್ರಿತ ಜಮೀನುಗಳಲ್ಲಿ ಬಿತ್ತನೆ ಕಾರ್ಯ ಚುರುಕುಗೊಂಡಿದೆ. ಬುಧವಾರ ಬೆಳ್ಳೂಡಿ ಸಮೀಪ ಶಿವಮೊಗ್ಗ ರಸ್ತೆ ಪಕ್ಕದ ಜಮೀನಿನಲ್ಲಿ ಬೆಳ್ಳೂಡಿ ರೈತರು ಏಕಕಾಲದಲ್ಲೇ ಟ್ರ್ಯಾಕ್ಟರ್ ಮೂಲಕ ಸಾಲು ಮಾಡಿದ ನಂತರ ಮಹಿಳೆಯರು ಮೆಕ್ಕೆಜೋಳ ಬಿತ್ತನೆ ಮಾಡಿ ಗೊಬ್ಬರ ಹಾಕಿದರು. ಇನ್ನೆರಡು ಟ್ರ್ಯಾಕ್ಟರ್‌ಗಳು ಬಿತ್ತನೆ ಮಾಡಿದ ಸಾಲುಗಳನ್ನು ಮುಚ್ಚುತ್ತಿರುವ ದೃಶ್ಯ ಕ್ಯಾಮರಾ ಕಣ್ಣಿಗೆ ಸೆರೆ ಸಿಕ್ಕಿತು.

## ಅಂತರ್ಯುದ್ಧದಿಂದ ಮ್ಯಾನ್ಮಾರ್‌ಗೆ ಹಿನ್ನಡೆ

ಬ್ಯಾಂಕಾಕ್, ಜೂ. 12 – ಒಂದು ಕಾಲದಲ್ಲಿ ವೇಗವಾಗಿ ಬೆಳೆಯುವ ಆರ್ಥಿಕತೆಯಾಗಿದ್ದ ಮ್ಯಾನ್ಮಾರ್, ಈಗ ಆಂತರ್ಯುದ್ಧದ ಕಾರಣದಿಂದಾಗಿ ತತ್ತರಿಸುತ್ತಿದೆ.

ಕಳೆದ ವರ್ಷ ದೇಶದ ಆರ್ಥಿಕತೆ ಶೇ.1ರಷ್ಟು ಮಾತ್ರ ಬೆಳವಣಿಗೆ ಕಂಡಿದೆ. ಇದು ನಿರೀಕ್ಷೆಗಿಂತ ಕಡಿಮೆಯಾಗಿದೆ ಎಂದು ವಿಶ್ವ ಬ್ಯಾಂಕ್ ಆರ್ಥಿಕ ಪರಿಣಿತರು ಹೇಳಿದ್ದಾರೆ. ಈ ವರ್ಷವೂ ಬೆಳವಣಿಗೆ ಶೇ.1ಕ್ಕೆ ಸೀಮಿತವಾಗುವ ಅಂದಾಜಿದೆ.

ದೇಶದ ಶೇ.33ರಷ್ಟು ಜನರು ಬಡತನಕ್ಕೆ (4ನೇ ಪುಟಕ್ಕೆ)

## 24ರಿಂದ ಸಂಸತ್ ಅಧಿವೇಶನ

ನವದೆಹಲಿ, ಜೂ. 12 – 18ನೇ ಲೋಕಸಭೆಯ ಮೊದಲ ಅಧಿವೇಶನ ಜೂನ್ 24ರಿಂದ ಆರಂಭವಾಗಲಿದೆ. ಮೊದಲ ಅಧಿವೇಶನದಲ್ಲಿ ನೂತನ ಸದಸ್ಯರು ಪ್ರಮಾಣ ವಚನ ಸ್ವೀಕರಿಸಲಿದ್ದಾರೆ ಹಾಗೂ ನೂತನ ಲೋಕಸಭಾಧ್ಯಕ್ಷರ ಆಯ್ಕೆ ನಡೆಯಲಿದೆ.

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಜೂನ್ 27ರಂದು ಲೋಕಸಭೆ ಹಾಗೂ ರಾಜ್ಯಸಭೆಗಳ ಜಂಟಿ (2ನೇ ಪುಟಕ್ಕೆ)




ನೀರಿನ ಮಟ್ಟ : 118 ಅಡಿ 2 ಇಂಚು
ಒಳ ಹರಿವು : 1395ಕ್ಯೂಸೆಕ್ಸ್
ಹೊರ ಹರಿವು : 342 ಕ್ಯೂಸೆಕ್ಸ್
ಕಳೆದ ವರ್ಷ : 137 ಅಡಿ 4 ಇಂಚು

# ಬಾಲ ಕಾರ್ಮಿಕ ಪದ್ಧತಿ ಸಮಾಜಕ್ಕೆ ಶಾಪವಿದ್ದಂತೆ

## ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆಯಲ್ಲಿ ಜಿಲ್ಲಾಧಿಕಾರಿ



ದಾವಣಗೆರೆ, ಜೂ. 12 - ರಾಷ್ಟ್ರೀಯ ಮಾದರಿ ಸಮೀಕ್ಷೆ ಕಚೇರಿ (ಎನ್.ಎಸ್.ಎಸ್.ಒ.) ವರದಿಯ ಪ್ರಕಾರ ದೇಶದಲ್ಲಿ 49 ಲಕ್ಷ ಬಾಲ ಕಾರ್ಮಿಕರಿದ್ದಾರೆ. ಬಾಲಕಾರ್ಮಿಕ ಪದ್ಧತಿಯು ಸಮಾಜಕ್ಕೆ ಅಂಟಿದ ಶಾಪ ಎಂದು ಜಿಲ್ಲಾಧಿಕಾರಿ ಎಂ.ವಿ. ವೆಂಕಟೇಶ್ ಹೇಳಿದರು.

ಜಿಲ್ಲಾಡಳಿತ, ಕಾರ್ಮಿಕ ಇಲಾಖೆ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಬಾಲಕಾರ್ಮಿಕ ಯೋಜನಾ ಸಂಸ್ಥೆ, ಜಿಲ್ಲಾ ವಕೀಲರ ಸಂಘ ಹಾಗೂ ಸ್ವಯಂ ಸೇವಾ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಎಸ್.ಪಿ.ಎಸ್. ನಗರದ ಸರ್ಕಾರಿ ಪ್ರೌಢಶಾಲೆಯಲ್ಲಿ ಆಯೋಜಿಸಲಾಗಿದ್ದ ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆಯ ಅಧ್ಯಕ್ಷತೆ ವಹಿಸಿ, ಅವರು ಮಾತನಾಡಿದರು.

ನಗರದಲ್ಲಿ ಮಂಡಕ್ಕಿ ಭಟ್ಟಿ, ಕ್ರಶರ್, ಗ್ಯಾರೇಜ್ ಮುಂತಾದ ಕಡೆಗಳಲ್ಲಿ ಬಾಲಕಾರ್ಮಿಕರನ್ನು ಪತ್ತೆ ಮಾಡಲಾಗಿದೆ. ಬಾಲ ಕಾರ್ಮಿಕ ಪದ್ಧತಿಯು ಸಮಾಜಕ್ಕೆ ಅಂಟಿಕೊಂಡಿರುವ ಶಾಪ. ಈ ಪಿಡುಗು ನಿವಾರಿಸಲು ಎಲ್ಲರೂ ಕೈ ಜೋಡಿಸಬೇಕು ಎಂದು ಕರೆ ನೀಡಿದರು.

ಜಿಲ್ಲಾ ಆಸ್ಪತ್ರೆಯಲ್ಲಿ ಪ್ರತಿ ನೂರು - ಇನ್ನೂರು ಗರ್ಭಿಣಿಯರಲ್ಲಿ ಒಬ್ಬರು ಅಪ್ರಾಪ್ತೆಯಾಗಿರುವುದು ಕಳವಳಕಾರಿ ಎಂದೂ ಅವರು ಹೇಳಿದರು.

ಮಕ್ಕಳ ಬೌದ್ಧಿಕ, ಸಾಮಾಜಿಕ ಹಾಗೂ ಅಧ್ಯಾತ್ಮಿಕ ಸಮತೋಲನದ ಬೆಳವಣಿಗೆ ಅಗತ್ಯವಾಗಿದೆ. ಬಾಲಕಾರ್ಮಿಕ ಪದ್ಧತಿಯಿಂದ ಮಕ್ಕಳಿಗೆ ಈ ಬೆಳವಣಿಗೆ ಸಿಗುವುದಿಲ್ಲ. ಮಕ್ಕಳು ಸ್ವಾತಂತ್ರ್ಯ ಮತ್ತು ಶಿಕ್ಷಣದಿಂದ ವಂಚಿತರಾಗುತ್ತಾರೆ. ಜೀವನದಲ್ಲಿ ಸಾಧನೆ ಮಾಡುವುದು ಕಷ್ಟವಾಗುತ್ತದೆ ಎಂದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಹಿರಿಯ ಸಿವಿಲ್ ನ್ಯಾಯಾಧೀಶ ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾವೀರ ಮ. ಕರೆಣ್ಣವರ, ಬಾಲಕಾರ್ಮಿಕ ಪದ್ಧತಿಯಿಂದ ಮಕ್ಕಳ ಭವಿಷ್ಯ ಕಿತ್ತುಕೊಂಡಂತಾಗುತ್ತದೆ. ಮಕ್ಕಳ ಸಾಧನೆಯ ಅವಕಾಶ ತಪ್ಪಿಸಿದಂತಾಗುತ್ತದೆ ಎಂದರು.

ಜಿಲ್ಲಾ ಪಂಚಾಯ್ತಿ ಹೆಚ್ಚುವರಿ ಕಾರ್ಯದರ್ಶಿ ಕೃಷ್ಣಾನಾಯ್ಕ ಮಾತನಾಡಿ, ತಾಲ್ಲೂಕು (4ನೇ ಪುಟಕ್ಕೆ)

# ನೂತನ ಸಂಸದೆ ಡಾ. ಪ್ರಭಾ ಅವರಿಂದ ಕೇಂದ್ರದ ಯೋಜನೆಗಳ ಪ್ರಗತಿ ಪರಿಶೀಲನೆ



ದಾವಣಗೆರೆ, ಜೂ. 12 - ನೂತನ ಸಂಸದರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ಇಂದು ವಿವಿಧ ಸಭೆಗಳಲ್ಲಿ ಭಾಗವಹಿಸಿದ್ದರು.


ಜಿಲ್ಲಾ ಪಂಚಾಯತ್ ಮುಖ್ಯ ನಿರ್ವಹಣಾಧಿಕಾರಿಗಳು ಮತ್ತು ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಪ್ರಭಾ, ಕೇಂದ್ರ ಸರ್ಕಾರದ ಯೋಜನೆಗಳ ಅನುಷ್ಠಾನ ಮತ್ತು ಪ್ರಗತಿಯ ಕುರಿತು ಚರ್ಚಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ನಿರ್ವಹಣಾಧಿಕಾರಿ ಡಾ. ಸುರೇಶ್ ಬಿ. ಇಟ್ನಾಳ್, ಉಪಕಾರ್ಯದರ್ಶಿ ಕೃಷ್ಣನಾಯ್ಕ ಮತ್ತಿತರರು ಉಪಸ್ಥಿತರಿದ್ದರು.

ಸಭೆಯ ನಂತರ ಗೃಹ ಕಚೇರಿ ಶಿವ-ಪಾರ್ವತಿಗೆ ಆಗಮಿಸಿದ್ದ ಕಾಂಗ್ರೆಸ್ ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರು ಹಾಗೂ ಮತದಾರ ಬಾಂಧವರಿಂದ ಶುಭಾಶಯಗಳನ್ನು ಸ್ವೀಕರಿಸಿದರು.

ತಹಶೀಲ್ದಾರ್ ಡಾ. ಎಂ.ಬಿ. ಅಶ್ವತ್ಥ್ ಅವರೊಂದಿಗೆ ಸಂಜೆ ಸಭೆ ನಡೆಸಿದ ಸಂಸದರು, ಇತ್ತೀಚಿಗೆ ಸುರಿದ ಪೂರ್ವ ಮುಂಗಾರು ಮಳೆಗೆ (4ನೇ ಪುಟಕ್ಕೆ)

## ಆಂಧ್ರ ಸಿಎಂ ಆಗಿ ಚಂದ್ರಬಾಬು ನಾಯ್ಡು ಪ್ರಮಾಣ ವಚನ



ಅಮರಾವತಿ, ಜೂ. 12 – ಟಿ.ಡಿ.ಪಿ. ಅಧ್ಯಕ್ಷ ಎನ್. ಚಂದ್ರಬಾಬು ನಾಯ್ಡು ಅವರು ಆಂಧ್ರ ಪ್ರದೇಶದ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ಪ್ರಮಾಣ ವಚನ ಸಮಾರಂಭದಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಸೇರಿದಂತೆ ಹಲವು ನಾಯಕರು ಉಪಸ್ಥಿತರಿದ್ದರು. ಜನಸೇನಾ ಅಧ್ಯಕ್ಷ ಹಾಗೂ ನಟ ಪವನ್ ಕಲ್ಯಾಣ್, ನಾಯ್ಡು ಪುತ್ರ ಎನ್. ಲೋಕೇಶ್ ಸೇರಿದಂತೆ 24 ಸಚಿವರೂ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ರಾಜ್ಯಪಾಲ ಎಸ್. ಅಬ್ದುಲ್ ನಜೀರ್ ಅವರು ಪ್ರಮಾಣ ವಚನ ಬೋಧಿಸಿದರು. ಕೇಂದ್ರ ಸಚಿವರಾದ ಅಮಿತ್ ಷಾ, ನಿತಿನ್ ಗಡ್ಕರಿ ಹಾಗೂ ಜೆ.ಪಿ. ನಡ್ಡಾ ಮತ್ತು ಮಹಾರಾಷ್ಟ್ರದ ಮುಖ್ಯಮಂತ್ರಿ ಏಕನಾಥ ಶಿಂಧೆ ಸಹ ಉಪಸ್ಥಿತರಿದ್ದರು.

## ರೋವರ್ಸ್, ರೇಂಜರ್ಸ್‌ಗಳಿಂದ ಸ್ವಚ್ಛತಾ ಕಾರ್ಯಕ್ರಮ



ದಾವಣಗೆರೆ, ಜೂ.12- ವಿಶ್ವ ಪರಿಸರ ದಿನದ ಅಂಗವಾಗಿ ಶ್ರೀಗಿರಿ ರಂಗನಾಥ ಬೆಟ್ಟ ದಾನವಾಡಿಯಲ್ಲಿ ಹಮ್ಮಿಕೊಂಡಿದ್ದ ಸ್ವಚ್ಛತಾ ಕಾರ್ಯಕ್ರಮಕ್ಕೆ ಪರಿಸರ ಪ್ರೇಮಿ ಹಾಗೂ ಸೈಕ್ಲಿಸ್ಟ್ ದೀಪಕ್ ತಿಮ್ಮೋಜಿ ಚಾಲನೆ ನೀಡಿದರು.

ಜಿಲ್ಲಾ ಸ್ಕೌಟ್ಸ್-ಗೈಡ್ಸ್ ಸಂಸ್ಥೆ, ಹಿಮಾಲಯನ್ ಅಡ್ವೆಂಚರ್ ಆ್ಯಂಡ್ ನೇಚರ್ ಅಕಾಡೆಮಿ ಹಾಗೂ ತಿಮ್ಮೋಜಿ ಆರ್ಕಿಟೆಕ್ಸ್ ಅವರ ಸಹಯೋಗದಲ್ಲಿ ಸ್ವಚ್ಛತಾ ಕಾರ್ಯಕ್ರಮ ನಡೆಯಿತು.

ನಿಸ್ವಾರ್ಥ ಸೇವೆಯಿಂದ ಸ್ವಚ್ಛತಾ ಕಾರ್ಯದಲ್ಲಿ ತೊಡಗಿದ ರೋವರ್ಸ್ ಹಾಗೂ ರೇಂಜರ್ಸ್‌ಗಳ ಸೇವೆಯನ್ನು ಚನ್ನಗಿರಿ ಶಿಕ್ಷಣಾಧಿಕಾರಿ ಎಲ್. ಜಯಪ್ಪ ಶ್ಲಾಘಿಸಿದರು.

ಶ್ರದ್ಧೆಯಿಂದ ಪರಿಸರ ಬಗ್ಗೆ ಕಾಳಜಿ ಹೊಂದಿದ ರೋವರ್ಸ್ ಹಾಗೂ ರೇಂಜರ್ಸ್‌ಗಳ ಸೇವೆಗೆ ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿ ಮಹೇಶ್ ಎಚ್. ದೊಡ್ಡಮನಿ ಹರ್ಷ ವ್ಯಕ್ತಪಡಿಸಿದರು.

ಹಿಮಾಲಯನ್ ಅಡ್ವೆಂಚರ್ ಆ್ಯಂಡ್ ನೇಚರ್ ಅಕಾಡೆಮಿಯ ಪ್ರಧಾನ ಕಾರ್ಯದರ್ಶಿ ಎನ್.ಕೆ. ಕೊಟ್ರೇಶ್ ಪ್ರಾಸ್ತಾವಿಕವಾಗಿ ಮಾತನಾಡಿ, ಪಾರ್ಟಿಯ ನೆಪದಲ್ಲಿ ಸುಂದರ ಪರಿಸರದಲ್ಲಿ ತಿಂದು ಕುಡಿದು, ತಾವು ತಂದಂತಹ ಪ್ಲಾಸ್ಟಿಕ್ ಲೋಟ, ಪ್ಲೇಟ್ಸ್‌ಗಳನ್ನು ಎಲ್ಲೆಂದರಲ್ಲಿ ಎಸೆದು ಪರಿಸರ ಹಾಳು ಮಾಡುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ದಾವಣಗೆರೆ ಜಿಲ್ಲಾ ಪಂಚಾಯತ್ ಪ್ರೋಗ್ರಾಮ್ ಆಫೀಸರ್ ಪೂರ್ಣಿಮಾ ಸ್ಥಳಕ್ಕೆ ಭೇಟಿ ನೀಡಿದರು.

ಈ ವೇಳೆ ಬಿ.ಆರ್.ಪಿ. ಶಂಕರಪ್ಪ, ಸಿ.ಆರ್.ಪಿ. ನಾಗರಾಜ್, ಜಿಲ್ಲಾ ಕಾರ್ಯದರ್ಶಿ ಎಂ. ರತ್ನಾ, ಜಿಲ್ಲಾ ಸಹ ಕಾರ್ಯದರ್ಶಿ ಡಾ. ಶಕುಂತಲಾ, ರೇಂಜರ್ ಲೀಡರ್ ಅಮೂಲ್ಯ, ಡಿ.ಬಿ. ಶಶಿಕುಮಾರ್, ಎಸ್.ಜಿ.ವಿ ಅಶ್ವಿನಿ, ಚನ್ನಬಸಪ್ಪ, ಸ್ವಾಮಿ, ಕೃಷ್ಣಮೂರ್ತಿ, ಎನ್. ನವೀನ್ ಮತ್ತಿತರರಿದ್ದರು.

## ವಿದ್ಯುತ್ ನಿಗಮ ಹುದ್ದೆಗಳ ಪರೀಕ್ಷೆ ಅಂತಿಮ ಅಂಕಪಟ್ಟಿ ಪ್ರಕಟ

**(1ನೇ ಪುಟದಿಂದ)** ಅಂತಿಮ ಅಂಕಪಟ್ಟಿಯನ್ನು ಕೆಪಿಸಿಎಲ್ ಸಂಸ್ಥೆಗೆ ಹಸ್ತಾಂತರಿಸಲಾಗುವುದು, ನಿಯಮಾನುಸಾರ ಆಯ್ಕೆ ಪಟ್ಟಿ ಪ್ರಕಟಿಸಲು ಕೆಪಿಸಿಎಲ್ ಕ್ರಮ ವಹಿಸಲಿದೆ ಎಂದಿದ್ದಾರೆ. ಕೆಪಿಸಿಎಲ್‌ನ ಎಇ, ಜೆಇ (ವಿವಿಧ ವಿಭಾಗಗಳ), ಕೆಮಿಸ್ಟ್ ಮತ್ತು ಕೆಮಿಕಲ್ ಸೂಪರ್‌ವೈಸರ್ ಹುದ್ದೆಗಳ ನೇಮಕಾತಿಗೆ ಈ ಪರೀಕ್ಷೆ ನಡೆಸಲಾಗಿತ್ತು.

# ಸಮಾಜ ತಿದ್ದುವ ಕಾರ್ಯದಲ್ಲಿ ಶಿಕ್ಷಕರ ಪಾತ್ರ ಅಮೋಘ

### ಹೆಚ್. ಮಲ್ಲಿಕಾರ್ಜುನ ಕೃತಿಗಳ ಬಿಡುಗಡೆ ಕಾರ್ಯಕ್ರಮದಲ್ಲಿ ಶ್ರೀ ಮಳೆ ಯೋಗೀಶ್ವರ ಸ್ವಾಮೀಜಿ



ಹರಪನಹಳ್ಳಿ,ಜೂ.12- ಶಿಕ್ಷಕ ವೃತ್ತಿ ಪವಿತ್ರ ವೃತ್ತಿಯಾಗಿದ್ದು, ಸಮಾಜ ತಿದ್ದುವಲ್ಲಿ ಶಿಕ್ಷಕರ ಪಾತ್ರ ಅಮೋಘವಾಗಿದೆ ಎಂದು ಹಿರೇಹಡಗಲಿಯ ಮಾನಿಹಳ್ಳಿ ಪುರವರ್ಗ ಮಠದ ಶ್ರೀ ಮಳೆಯೋಗೀಶ್ವರ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಪಟ್ಟಣದ ಶಿಕ್ಷಣ ಮಹಾ ವಿದ್ಯಾಲಯದಲ್ಲಿ, ಶಿಕ್ಷಣ ಮಹಾವಿದ್ಯಾಲಯ, ಸಪ್ನ ಪ್ರಕಾಶನ ಮತ್ತು ನವಜ್ಯೋತಿ ಸಾಂಸ್ಕೃತಿಕ ಸೇವಾ ಸಂಸ್ಥೆ ಇವರ ಸಂಯುಕ್ತ ಆಶ್ರಯದಲ್ಲಿ, ಹೆಚ್. ಮಲ್ಲಿಕಾರ್ಜುನ ವಿರಚಿತ 'ನಾನು ಗೆದ್ದೇ ಗೆಲ್ಲುತ್ತೇನೆ ಮತ್ತು ಕನ್ನಡ ನಾಡು ನುಡಿ ವೈಭವ' ಕೃತಿಗಳ ಲೋಕಾರ್ಪಣೆ ಮಾಡಿ ಅವರು ಮಾತನಾಡಿದರು.

ಕೆಲವರು ಸಾಧನೆಯಿಂದ ದೊಡ್ಡವರಾದರೆ, ಕೆಲವರು ಸ್ಥಾನದಿಂದ ದೊಡ್ಡವರಾಗುತ್ತಾರೆ. ಆದರೆ ಸಾಧನೆಯಿಂದ ದೊಡ್ಡವರಾದವರ ಜೀವನ ಸಾರ್ಥಕವಾಗುತ್ತದೆ. ಮನುಷ್ಯ ಸಾಧನೆಗೆ ಪ್ರಯತ್ನ ಶೀಲರಾದರೆ ಗುರಿ ಮುಟ್ಟಲು ಸಾಧ್ಯವಾಗುತ್ತದೆ. ಬಡವ ಬಲ್ಲಿದ ಎನ್ನದೇ, ಶಿಕ್ಷಣವೆಂಬ ಸಾಗರ ದಾಟಿದರೆ ನೀವು ಜಯಶೀಲರಾಗುತ್ತೀರಿ. ಶಿಕ್ಷಣದಿಂದ ಸರ್ಕಾರಿ ನೌಕರಿ ಸಿಗಲಿ, ಸಿಗದೇ ಇರಲಿ ಯಾವುದಾದರೂ ಕಾಯಕ ಮಾಡಿ, ಕಾಯಕದಲ್ಲಿ ದೇವರನ್ನು ಕಾಣಿ ಎಂದರು.

ಅಕ್ರಮದಿಂದ ಗಳಿಸಿದ ಸಂಪತ್ತು ಶಾಶ್ವತವಲ್ಲ, ನಿಯತ್ತಿನಿಂದ ದುಡಿದ ಹಣದಿಂದ ಸುಖಮಯ ಜೀವನ ನಡೆಸಬೇಕು. ಆತ್ಮ ತೃಪ್ತಿಯಿಂದ ಜೀವನ ನಡೆಸಲು ಇದ್ದುದರಲ್ಲಿಯೇ ತೃಪ್ತಿಪಡಬೇಕು, ಜಾತಿ, ಮತ ಎನ್ನದೇ ವಿಶಾಲ ಮನೋ ಭಾವನೆಯಿಂದ ಜೀವನ ನಡೆಸಬೇಕು ಎಂದು ಅವರು ತಿಳಿಸಿದರು.

ತೆಗ್ಗಿನಮಠದ ಕಾರ್ಯದರ್ಶಿ ಡಾ.ಟಿ. ಎಂ.ಚಂದ್ರಶೇಖರ ಮಾತನಾಡಿ, ವಿದ್ಯಾರ್ಥಿಗಳು ಗುರಿ ಮತ್ತು ಸಾಧನೆಯ ಬಗ್ಗೆ, ಯೋಗ ಮತ್ತು ಆರೋಗ್ಯದ ಬಗ್ಗೆ ಈ ಪುಸ್ತಕದಲ್ಲಿ ಬರೆದಿದ್ದು, ಪುಸ್ತಕವನ್ನು ಓದಿ, ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಿ ಎಂದರು.

ಕೃತಿಗಳ ಕರ್ತೃ ಉಪನ್ಯಾಸಕ ಎಚ್. ಮಲ್ಲಿಕಾರ್ಜುನ ಮಾತನಾಡಿ, ಕನ್ನಡ ಭಾಷೆಯ ಉಳಿವಿಗೆ ಮತ್ತು ಬೆಳವಣಿಗೆಗೆ ಭಾಷಾಭಿಮಾನ, ಭಾಷೆಯನ್ನು ಶ್ರೀಮಂತಗೊಳಿಸುವ, ಮುನ್ನಡೆಸುವ ಇಚ್ಛಾಶಕ್ತಿ ಬೇಕು. ಅನ್ಯಭಾಷಿಗರಿಗೆ ಕನ್ನಡ ಕಲಿಸೋಣ, ಕನ್ನಡಿಗರೆಲ್ಲರೂ ಕನ್ನಡ ಭಾಷೆಯನ್ನು ಹೆಬ್ಬಾಗಿಲಿನಂತೆ ಬಳಸಿ ಇತರೆ ಭಾಷೆಗಳನ್ನು ಗಾಳಿ ಬೆಳಕಿಗೆ ಬೇಕಾದ ಕಿಟಿಕಿಗಳಂತೆ ಉಪಯೋಗಿಸಿ ಬೇಕು ಎಂದರು.

'ಕನ್ನಡ ನಾಡು-ನುಡಿ ವೈಭವ ' ಪುಸ್ತಕ ಕುರಿತು ನಿವೃತ್ತ ಕನ್ನಡ ಉಪನ್ಯಾಸಕ ಎಂ.ಪಿ. ಎಂ. ಶಾಂತವೀರಯ್ಯ ಮಾತನಾಡಿದರು.

'ನಾನು ಗೆದ್ದೆ ಗೆಲ್ಲುತ್ತೇನೆ' ಪುಸ್ತಕ ಕುರಿತು ನಿವೃತ್ತ ಶಿಕ್ಷಕ ಬಣಕಾರ ರಾಜಶೇಖರ ಮಾತನಾಡಿದರು.

ಕನ್ನಡ ಸಾಹಿತ್ಯ ಪರಿಷತ್ತು ಮಾಜಿ ಅಧ್ಯಕ್ಷ ಡಿ.ರಾಮನಮಲಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಕೆ. ಉಚ್ಚೆಂಗೆಪ್ಪ, ಮಾಜಿ ಅಧ್ಯಕ್ಷ ಮಾಡ್ಲಗೇರಿ ಸುಭದ್ರಮ್ಮ, ಕನ್ನಡ ಸಾಹಿತ್ಯ ಪರಿಷತ್ತು ತೆಲಿಗಿ ಘಟಕದ ಅಧ್ಯಕ್ಷ ಕೆ.ಎಸ್.ವೀರಭದ್ರಪ್ಪ ಮಾತನಾಡಿದರು.

ಸಪ್ನ ಪ್ರಕಾಶನ ಮತ್ತು ನವಜ್ಯೋತಿ ಸಾಂಸ್ಕೃತಿಕ ಸಂಸ್ಥೆಯ ಅಧ್ಯಕ್ಷೆ ಸ್ವಪ್ನ ಮಲ್ಲಿಕಾರ್ಜುನ್, ಸಾಹಿತಿ ಇಸ್ಮಾಯಿಲ್ ಎಲಿಗಾರ್, ಕವಿ ಕೃಷ್ಣ ದೊಡ್ಡಬಾತಿ, ಉಪನ್ಯಾಸಕ ಗಿರೀಶ ಸೇರಿದಂತೆ ಇತರರು ಇದ್ದರು.

## ಕಾಶ್ಮೀರ : ಕಾರ್ಯಾಚರಣೆಯಲ್ಲಿ ಇಬ್ಬರು ಉಗ್ರರು ಹತ

### ಸಿ.ಆರ್.ಪಿ.ಎಫ್. ಸೈನಿಕ ಹುತಾತ್ಮ

ಜಮ್ಮು, ಜೂ. 12 – ಜಮ್ಮು ಮತ್ತು ಕಾಶ್ಮೀರದ ಕಥುವಾ ಜಿಲ್ಲೆಯಲ್ಲಿ ನಡೆಸಲಾದ ಕಾರ್ಯಾಚರಣೆಯಲ್ಲಿ ಇಬ್ಬರು ಉಗ್ರರು ಹತರಾಗಿದ್ದಾರೆ. ಕಾರ್ಯಾಚರಣೆ ವೇಳೆ ಸಿ.ಆರ್.ಪಿ.ಎಫ್. ಸೈನಿಕರೊಬ್ಬರು ಹುತಾತ್ಮರಾಗಿದ್ದಾರೆ.

ಮಂಗಳವಾರ ರಾತ್ರಿ ಇಬ್ಬರು ಉಗ್ರರು ಸೈದಾ ಸುಖಲ್ ಹಳ್ಳಿಯಲ್ಲಿರುವ ಬಗ್ಗೆ ಮಾಹಿತಿ ದೊರೆತಿತ್ತು. ಭದ್ರತಾ ಸಿಬ್ಬಂದಿ ಉಗ್ರರನ್ನು ಸುತ್ತುವರಿದು ಕಾರ್ಯಾಚರಣೆ ನಡೆಸಿದರು.

ತಪ್ಪಿಸಿಕೊಂಡು ಹೋಗಲು ಉಗ್ರ ಮನಬಂದಂತೆ ಗುಂಡು ಹಾರಿಸಿದ. ಆಗ ಸಿ.ಆರ್.ಪಿ.ಎಫ್. ಸೈನಿಕ ಕಬೀರ್ ದಾಸ್ ಅವರು ಹುತಾತ್ಮರಾಗಿದ್ದಾರೆ.

ಗುಂಡಿನ ಚಕಮಕಿಯಲ್ಲಿ ಇಬ್ಬರು ಉಗ್ರರೂ ಹತರಾಗಿದ್ದಾರೆ. ಈ ಇಬ್ಬರೂ ಉಗ್ರರು ಪಾಕಿಸ್ತಾನದವರೆಂದು ಶಂಕಿಸಲಾಗಿದೆ. ಮತ್ತೊಂದು ಘಟನೆಯಲ್ಲಿ, ದೋಡಾ ಜಿಲ್ಲೆಯ ಚೆಕ್ ಪೋಸ್ಟ್ ಬಳಿ ಉಗ್ರರು ಭದ್ರತಾ ಸಿಬ್ಬಂದಿ ಮೇಲೆ ಗುಂಡು ಹಾರಿಸಿದ್ದಾರೆ. ಉಗ್ರರ ಗುಂಡಿನಿಂದ ರಾಷ್ಟ್ರೀಯ ರೈಫಲ್ಸ್‌ನ ಐವರು ಸೈನಿಕರು ಹಾಗೂ ವಿಶೇಷ ಪೊಲೀಸ್ ಅಧಿಕಾರಿಯೊಬ್ಬರು ಗಾಯಗೊಂಡಿದ್ದಾರೆ. ಉಗ್ರರ ಪತ್ತೆಗಾಗಿ ಕಾರ್ಯಾಚರಣೆ ನಡೆಸಲಾಗುತ್ತಿದೆ.

## ಕುವೈತ್ ಅಗ್ನಿ ಅವಘಡ : 49 ಜನರ ಸಾವು ಮೃತರಲ್ಲಿ ಬಹುತೇಕರು ಭಾರತೀಯರು

ದುಬೈ/ಕುವೈತ್ ನಗರ, ಜೂ. 12 – ಕುವೈತ್‌ನ ಬಹುಮಹಡಿ ಕಟ್ಟಡದಲ್ಲಿ ಬೆಂಕಿ ಕಾಣಿಸಿಕೊಂಡಿದ್ದು, ಕನಿಷ್ಠ 49 ಜನರು ಸಾವನ್ನಪ್ಪಿದ್ದಾರೆ. ಇವರಲ್ಲಿ ಬಹುತೇಕರು ಭಾರತೀಯರಾಗಿದ್ದಾರೆ. ಘಟನೆಯಲ್ಲಿ 50 ಇತರರು ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಮೃತರಲ್ಲಿ ಬಹುತೇಕರು ಬೆಂಕಿಯಿಂದ ಹೊಗೆ ಹರಡಿದ ಸಮಯದಲ್ಲಿ ಮಲಗಿದವರಾಗಿದ್ದಾರೆ. ಬೆಂಕಿಯ ನಂತರ ಕಟ್ಟಡದಲ್ಲಿದ್ದ ಬಹುತೇಕರನ್ನು ತೆರವುಗೊಳಿಸಲಾಗಿದೆ.

ಮಂಗಫ್ ಪ್ರದೇಶದಲ್ಲಿರುವ ಆರು ಮಹಡಿ ಕಟ್ಟಡದ ಅಡುಗೆ ಮನೆಯಲ್ಲಿ ಬೆಂಕಿ ಕಾಣಿಸಿಕೊಂಡು ನಂತರ ಕಟ್ಟಡದ ಇತರೆಡೆ ಹರಡಿದೆ. ಈ ಕಟ್ಟಡದಲ್ಲಿ 195 ಜನರಿದ್ದರು. ಅವರು ಒಂದೇ ಕಂಪನಿಯಲ್ಲಿ ಕೆಲಸ ಮಾಡುವ ಕಾರ್ಮಿಕರು.

ಮೃತರಲ್ಲಿ ಬಹುತೇಕರು ಕೇರಳ, ತಮಿಳುನಾಡು ಹಾಗೂ ಉತ್ತರ ಭಾರತದ ರಾಜ್ಯಗಳಿಗೆ ಸೇರಿದವರು. ಇವರೆಲ್ಲ 20ರಿಂದ 50 ವರ್ಷ ವಯಸ್ಸಿನವರು. ಕಟ್ಟಡವನ್ನು ಎನ್.ಬಿ.ಟಿ.ಸಿ. ಸಮೂಹಕ್ಕೆ ಬಾಡಿಗೆ ಮೇಲೆ ನೀಡಲಾಗಿತ್ತು.

ಮೃತರಲ್ಲಿ ಇತರೆ ಕೆಲ ದೇಶಗಳಿಗೆ ಸೇರಿದವರೂ ಇದ್ದಾರೆ. ಬೆಂಕಿ ನಂದಿಸುವ ಕಾರ್ಯದಲ್ಲಿ ತೊಡಗಿದ್ದ ಅಗ್ನಿಶಾಮಕ ದಳದ ಐವರು ಗಾಯಗೊಂಡಿದ್ದಾರೆ.

## ಆರ್.ಎಸ್.ಎಸ್. ಈಗ ಅಪ್ರಸ್ತುತ : ಕಾಂಗ್ರೆಸ್

ನವದೆಹಲಿ, ಜೂ. 12 – ಆರ್.ಎಸ್.ಎಸ್. ಸಂಘಟನೆ ಹಾಗೂ ಅದರ ಅಧ್ಯಕ್ಷ ಮೋಹನ್ ಭಾಗವತ್ ಅಪ್ರಸ್ತುತವಾಗಿದ್ದಾರೆ. ಸಂವಿಧಾನ, ಪ್ರಜಾಪ್ರಭುತ್ವ ಹಾಗೂ ಸಮಾಜಕ್ಕೆ ಆರ್.ಎಸ್.ಎಸ್. ಅಗತ್ಯವಿಲ್ಲ ಎಂದು ಕಾಂಗ್ರೆಸ್ ಹೇಳಿದೆ.

ಮಣಿಪುರ ಹಿಂಸಾಚಾರ ಹಾಗೂ ಲೋಕಸಭಾ ಚುನಾವಣೆ ಸೇರಿದಂತೆ ಹಲವಾರು ವಿಷಯಗಳ ಬಗ್ಗೆ ಭಾಗವತ್ ಇತ್ತೀಚೆಗೆ ಹೇಳಿಕೆ ನೀಡಿದ್ದರು.

ಈ ಬಗ್ಗೆ ಪ್ರತಿಕ್ರಿಯಿಸಿರುವ ಕಾಂಗ್ರೆಸ್ ಮಾಧ್ಯಮ ವಿಭಾಗದ ಮುಖ್ಯಸ್ಥ ಪವನ್ ಖೇರ, ರೈತರು ಸಂಕಷ್ಟ ಎದುರಿಸಿದ್ದಾಗ, ಹತ್ರಾಸ್ ಅತ್ಯಾಚಾರ ಘಟನೆ ನಡೆದಾಗ, ಬಿಲ್ಕಿಸ್ ಬಾನೋ ಅತ್ಯಾಚಾರಿಗಳನ್ನು ಬಿಡುಗಡೆ ಮಾಡಿದಾಗ ಭಾಗವತ್ ಮೌನವಾಗಿದ್ದರು ಎಂದು ಹೇಳಿದ್ದಾರೆ. ನಿಮ್ಮ ಮೌನ ಹಾಗೂ ನರೇಂದ್ರ ಮೋದಿ ಕಾರಣದಿಂದಾಗಿ ನೀವು ಹಾಗೂ ಸಂಘ ಅಪ್ರಸ್ತುತವಾಗಿದ್ದೀರಿ. ಅಮಿತ್ ಷಾ ಹಾಗೂ ಬಿಜೆಪಿ ನಿಮ್ಮನ್ನು ಅಪ್ರಸ್ತುತ ಮಾಡಿದ್ದಾರೆ. ಬಿಜೆಪಿ ನಾಯಕರು ಸಂವಿಧಾನ ಬದಲಿಸುವ ಮಾತನಾಡಿದಾಗ ನಿಮಗೆ ಕೊನೆಯ ಅವಕಾಶವಿತ್ತು. ಆದರೆ, ನೀವು ಮೌನವಾಗಿದ್ದಿರಿ. ಈಗ ಮಾತನಾಡಿ ಏನೂ ಪ್ರಯೋಜನವಿಲ್ಲ ಎಂದು ಖೇರ ಹೇಳಿದ್ದಾರೆ.

ಸಮಾಜಕ್ಕೆ ಆರ್.ಎಸ್.ಎಸ್., ಇಲ್ಲವೇ ಭಾಗವತ್ ಅವಶ್ಯಕತೆ ಇಲ್ಲ. ಸಮಾಜ ತಾನೇ ರಕ್ಷಿಸಿಕೊಳ್ಳಬಲ್ಲದು ಎಂದೂ ಖೇರ ಹೇಳಿದ್ದಾರೆ.

## ಅಂಗನವಾಡಿ ಕಾರ್ಯಕರ್ತೆ, ಮೇಲ್ವಿಚಾರಕಿಯರಿಗೆ ಸ್ಮಾರ್ಟ್ ಫೋನ್



ದಾವಣಗೆರೆ, ಜೂ. 12 - ರಾಷ್ಟ್ರೀಯ ಪೋಷಣ್ ಅಭಿಯಾನ ಯೋಜನೆಯಡಿ ದಾವಣಗೆರೆ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ವೃತ್ತದ ಮೇಲ್ವಿಚಾರಕಿಯರಿಗೆ ಕೇಂದ್ರ ಸರ್ಕಾರದ ಯೋಜನೆಯಾದ ರಾಷ್ಟ್ರೀಯ ಪೋಷಣ್ ಅಭಿಯಾನ (ಮಿಷನ್ 2.0) ಯೋಜನೆಯಡಿ ಸ್ಯಾಮ್‌ಸಾಂಗ್ ಗ್ಯಾಲಾಕ್ಸಿ 40.ಎಸ್ ಸ್ಮಾರ್ಟ್ ಫೋನ್‌ಗಳನ್ನು ವಿತರಿಸಲಾಗಿದೆ.

ಈ ಫೋನ್ ಮೂಲಕ ಅಂಗನವಾಡಿ ಕಾರ್ಯಕರ್ತೆಯರು ಪೋಷಣ್ ಟ್ರ್ಯಾಕರ್ ಆಪ್ ಮೂಲಕ ಪ್ರತಿ ದಿನ ಅಂಗನವಾಡಿ ಕೇಂದ್ರದ ದೈನಂದಿನ ಚಟುವಟಿಕೆಗಳಾದ ಮಕ್ಕಳ ಹಾಜರಾತಿ, ಶಾಲಾ ಪೂರ್ವ ಶಿಕ್ಷಣ ಹಾಗೂ ಬಿಸಿ ಊಟ ವಿತರಣೆ ಮುಂತಾದವುಗಳನ್ನು ಪೋಷಣ್ ಟ್ರ್ಯಾಕ ರ್‌ನಲ್ಲಿ ತಪ್ಪದೇ ಅಳವಡಿಸಬೇಕು ಹಾಗೂ ಸರ್ಕಾರ ದಿಂದ ನೀಡಿರುವ ಸ್ಮಾರ್ಟ್ ಫೋನ್‌ಗಳನ್ನು ಸದ್ಬಳಕೆ ಮಾಡಿಕೊಂಡು, ಇಲಾಖಾ ಮಾಹಿತಿಯನ್ನು ನಿರ್ವಹಿಸಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರಾದ ವಾಸಂತಿ ಉಪ್ಪಾರ್ ತಿಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ನಿರೂಪಣಾಧಿಕಾರಿ ರಾಜಕುಮಾರ್ ರಾಠೋಡ್, ಶಿಶು ಅಭಿವೃದ್ಧಿ ಯೋಜನಾಧಿಕಾರಿ ಅಭಿಕುಮಾರ್ ಜಿ.ಎಸ್, ಮೇಲ್ವಿಚಾರಕಿಯರು, ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಪೋಷಣ್ ಅಭಿಯಾನ ಯೋಜನೆಯ ಸಿಬ್ಬಂದಿಗಳು ಹಾಜರಿದ್ದರು.

## ವೇತನ ವಿಳಂಬ : ಹರಿಹರ ಸಾರ್ವಜನಿಕ ಆಸ್ಪತ್ರೆ 'ಡಿ' ಗ್ರೂಪ್ ನೌಕರರ ಪ್ರತಿಭಟನೆ



ಹರಿಹರ, ಜೂ. 12- ವೇತನ ಪಾವತಿಯಾಗದ ಹಿನ್ನೆಲೆಯಲ್ಲಿ ನಗರದ ಸಾರ್ವಜನಿಕ ಆಸ್ಪತ್ರೆಯ 'ಡಿ' ಗ್ರೂಪ್ ನೌಕರರು ಕೆಲಸವನ್ನು ಸ್ಥಗಿತಗೊಳಿಸಿ, ಪ್ರತಿಭಟಿಸುವ ಮೂಲಕ ವೇತನ ನೀಡುವಂತೆ ಆಗ್ರಹಿಸಿದರು.

ಈ ವೇಳೆ ಆಸ್ಪತ್ರೆಯ ಡಿ ಗ್ರೂಪ್ ಸಿಬ್ಬಂದಿಗಳಾದ ದುರುಗೇಶ, ಹರೀಶ್, ನಿಂಗರಾಜ್, ಜ್ಯೋತಿ, ರತ್ನಮ್ಮ, ಕರಿಬಸಮ್ಮ ಚಂದ್ರು ಮಾತನಾಡಿ, ಕಳೆದ 3 ತಿಂಗಳಿಂದ ನಮಗೆ ವೇತನ ನೀಡದೇ ಇರುವುದರಿಂದ ದಿನನಿತ್ಯದ ಜೀವನ ನಡೆಸುವುದು ಕಷ್ಟವಾಗಿದೆ. ಆದ್ದರಿಂದ ಆಸ್ಪತ್ರೆಯ ವೈದ್ಯಾಧಿಕಾರಿಗಳು ಆದಷ್ಟು ಬೇಗನೆ ವೇತನ ನೀಡುವಂತೆ ಆಗ್ರಹಿಸಿದರು.

ಆಸ್ಪತ್ರೆಯ ಆಡಳಿತಾಧಿಕಾರಿ ಡಾ. ಹನುಮನಾಯ್ಕ್ ದೂರವಾಣಿಯಲ್ಲಿ ಮಾತನಾಡಿ, ಹಳೆಯ ಟೆಂಡರ್‌ದಾರರಾದ ದೀಕ್ಷಾ ಏಜೆನ್ಸಿಯವರು ಒಂದು ತಿಂಗಳ ವೇತನ ಮತ್ತು ಟಾರ್ಗೆಟ್ ಏಜೆನ್ಸಿಯವರು ಎರಡು ತಿಂಗಳ ವೇತನ ನೀಡುವಲ್ಲಿ ವಿಳಂಬವಾಗಿದ್ದು, ಅವರಿಗೆ ಇಂದು ದೂರವಾಣಿ ಕರೆಯನ್ನು ಮಾಡಲಾಗಿದ್ದು, ಶೀಘ್ರವಾಗಿ ಹಣವನ್ನು ಪಾವತಿ ಮಾಡುವುದಾಗಿ ತಿಳಿಸಿದ್ದಾರೆ. ಹಾಗಾಗಿ ನಾಳೆ ಅಥವಾ ನಾಡಿದ್ದು ಎಲ್ಲಾ ನೌಕರರ ವೇತನವನ್ನು ನೀಡಲಾಗುತ್ತದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಸಹಾಯಕ ಆಡಳಿತ ಅಧಿಕಾರಿ ವಿಶ್ವನಾಥ, ಲೆಕ್ಕಾಧಿಕಾರಿ ಮಲ್ಲೇಶ್, ತಿಪ್ಪೇಸ್ವಾಮಿ ಉಮೇಶ್, ಚೇತನ್, ಹರೀಶ್, ವೀರೇಂದ್ರ, ದುರುಗೇಶ್, ಎಂ. ಮಂಜುನಾಥ್, ರಜನಿಕಾಂತ್, ಮಂಜುನಾಥ್, ಮಂಗಳಮ್ಮ, ಕರಿಬಸಮ್ಮ, ಲಕ್ಷ್ಮಮ್ಮ, ದಾಗಿಭಾಯಿ, ವಿಜಯಮ್ಮ, ಹೀರಾಬಾಯಿ, ಅನುಸೂಯಮ್ಮ, ಕಾಂತಮ್ಮ ಇತರರು ಹಾಜರಿದ್ದರು

## ಹೆಚ್‌ಡಿಕೆ ಜೆಡಿಎಸ್ ರಾಜ್ಯಾಧ್ಯಕ್ಷ ಸ್ಥಾನ ತೆರವು

**(1ನೇ ಪುಟದಿಂದ)** ಡಿ.ರೇವಣ್ಣ ಅವರೇ ಹಿರಿಯ ಸದಸ್ಯರು, ಆದರೆ, ಪ್ರಸಕ್ತ ಸನ್ನಿವೇಶದಲ್ಲಿ ಅವರಿಗೆ ಯಾವುದೇ ಅಧಿಕಾರವನ್ನು ಪಕ್ಷ ನೀಡುವ ಸಾಧ್ಯತೆ ಇಲ್ಲ. ಹೀಗಾಗಿ ಜಿ.ಟಿ.ದೇವೇಗೌಡರಿಗೇ ಶಾಸಕಾಂಗ ಪಕ್ಷದ ನಾಯಕತ್ವ ದೊರೆಯುವ ಸಾಧ್ಯತೆ ಇದೆ.

ಇನ್ನು ಪಕ್ಷದ ರಾಜ್ಯಾಧ್ಯಕ್ಷ ಸ್ಥಾನಕ್ಕೆ ಕುರುಬ ಸಮುದಾಯಕ್ಕೆ ಸೇರಿದ ಮಾಜಿ ಸಚಿವ ಬಂಡೆಪ್ಪ ಕಾಶೆಂಪೂರ, ಇಲ್ಲವೇ ಹಾಲಿ ಶಾಸಕ ಸುರೇಶ್ ಬಾಬು ಅವರ ಹೆಸರುಗಳು ಚಲಾವಣೆಯಲ್ಲಿವೆ.

ಅಲ್ಲದೆ, ಯುವ ಶಾಸಕ ಶರಣಗೌಡ ಕಂದಕೂರ್ ಅವರನ್ನು ಅಧ್ಯಕ್ಷರನ್ನಾಗಿ ಮಾಡುವ ಬಗ್ಗೆಯೂ ಚರ್ಚೆ ನಡೆದಿದೆ. ಕೇಂದ್ರ ಸಚಿವರಾದ ನಂತರ ಕುಮಾರಸ್ವಾಮಿ ರಾಜ್ಯಕ್ಕೆ ಇನ್ನೂ ಭೇಟಿ ನೀಡಿಲ್ಲ, ಅವರು ಶುಕ್ರವಾರ ನಗರಕ್ಕೆ ಬರಲಿದ್ದು ಆ ಸಂದರ್ಭದಲ್ಲಿ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಹೆಚ್.ಡಿ.ದೇವೇಗೌಡ ಅವರೊಂದಿಗೆ ಚರ್ಚಿಸಿ, ತಮ್ಮಿಂದ ತೆರವಾಗುತ್ತಿರುವ ಸ್ಥಾನಕ್ಕೆ ನೇಮಕದ ಬಗ್ಗೆ ತೀರ್ಮಾನ ಕೈಗೊಳ್ಳಲಿದ್ದಾರೆ ಎಂದು ಉನ್ನತ ಮೂಲಗಳು ತಿಳಿಸಿವೆ.

## ಎಸ್.ಎಸ್.ಕೆ. ಸಮಾಜ, ರೋಟರಿ ದಕ್ಷಿಣದಿಂದ ಪರಿಸರ ದಿನಾಚರಣೆ



ದಾವಣಗೆರೆ, ಜೂ. 12 - ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಎಸ್.ಎಸ್.ಕೆ. ಸಮಾಜ ಹಾಗೂ ರೋಟರಿ ಕ್ಲಬ್ ದಾವಣಗೆರೆ ದಕ್ಷಿಣದ ಸಹಭಾಗಿತ್ವದಲ್ಲಿ ಸ್ಥಳೀಯ ಶಂಕರ ವಿಹಾರ ಬಡಾವಣೆಯಲ್ಲಿರುವ ಶ್ರೀ ಅಂಬಾಭವಾನಿ ದೇವಿ ದೇವಸ್ಥಾನದ ಆವರಣದಲ್ಲಿ ಇಂದು ಏರ್ಪಾಡಾಗಿದ್ದ ಸಸಿ ನೆಡುವ ಕಾರ್ಯಕ್ರಮಕ್ಕೆ ಜಿಲ್ಲಾಧಿಕಾರಿ ಡಾ. ವೆಂಕಟೇಶ್ ಎಂ.ವಿ. ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾಧಿಕಾರಿಗಳು, ಸಾರ್ವಜನಿಕರು ಪರಿಸರ ಸಂರಕ್ಷಣೆ ಹಾಗೂ ಸಸಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ನೆಡಲು ಹಾಗೂ ಪೋಷಿಸಲು ಕರೆ ನೀಡಿದರು.

ರೋಟರಿ ಕ್ಲಬ್ ದಾವಣಗೆರೆ ದಕ್ಷಿಣದ ಅಧ್ಯಕ್ಷ ಪುಟ್ಟೇಶ ಎಂ.ಆರ್., ಮಹಾನಗರ ಪಾಲಿಕೆ ಸದಸ್ಯರಾದ ಶ್ರೀಮತಿ ಆಶಾ ಉಮೇಶ್, ಎಸ್.ಎಸ್.ಕೆ. ಸಮಾಜದ ಅಧ್ಯಕ್ಷ ಮಲ್ಲಾರಸಾ ಆರ್. ಕಾಟ್ವೆ, ಮಹಿಳಾ ಮಂಡಳಿಯ ಅಧ್ಯಕ್ಷರಾದ ಶ್ರೀಮತಿ ಗಾಯತ್ರಿ ಬಾಯಿ, ಎಂ ಹಬೀಬ್ ಸೇರಿದಂತೆ ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಚಿಲ್ಲರೆ ಹಣದುಬ್ಬರದಲ್ಲಿ ಇಳಿಕೆ

ನವದೆಹಲಿ, ಜೂ. 12 – ಮೇ ತಿಂಗಳಲ್ಲಿ ಚಿಲ್ಲರೆ ಹಣದುಬ್ಬರ ಇಳಿಮುಖವಾಗಿದ್ದು, ವರ್ಷದಲ್ಲೇ ಅತಿ ಕಡಿಮೆ ಶೇ.4.75ರ ಹಂತಕ್ಕೆ ತಲುಪಿದೆ. ಹಣದುಬ್ಬರ ದರ ರಿಸರ್ವ್ ಬ್ಯಾಂಕ್‌ನ ಅಪೇಕ್ಷಿತ ಮಟ್ಟವಾದ ಶೇ.6ಕ್ಕಿಂತ ಕಡಿಮೆ ಇದೆ.

ಜನವರಿಯಲ್ಲಿ ಹಣದುಬ್ಬರ ಶೇ.4.83ರ ಹಂತದಲ್ಲಿತ್ತು. ನಂತರ ಇಳಿಮುಖವಾಗಿದೆ. ಕಳೆದ 2023ರ ಮೇ ತಿಂಗಳಲ್ಲಿ ಹಣದುಬ್ಬರ ಶೇ.4.31ರಷ್ಟಿತ್ತು


## ಪ್ರಕಟಣೆ

ಈ ಕೆಳಗೆ ಸಹಿ ಮಾಡಿದ ಶ್ರೀ ಹೆಚ್.ಎಂ. ಸಿದ್ದಯ್ಯ ಬಿನ್ ಲೇಟೆ ಹೆಚ್.ಎಂ. ಸಿದ್ದಲಿಂಗಯ್ಯ, ಡೋರ್ ನಂ. 1058/1, 4ನೇ ಕ್ರಾಸ್, 2ನೇ ಮೇನ್, ವಿನೋಬ ನಗರ, ದಾವಣಗೆರೆ ಸಿಟಿ ವಾಸಿಯಾದ ನಾನು, ನನ್ನ ಮಾಲೀಕತ್ವದಲ್ಲಿರುವ ದಾವಣಗೆರೆ ಸಿಟಿ, ವಿನೋಬ ನಗರ, 2ನೇ ಮೇನ್, 11ನೇ ಕ್ರಾಸ್‌ನಲ್ಲಿ ಬರತಕ್ಕ ಸೈಟ್ ನಂ. 532, ಚಾಲ್ತಿ ಡೋರ್ ನಂ. 1387/1, 2ಅಳತೆ ; 34x20 ಅಡಿ ವುಳ್ಳ ಪೂರಾ ಸೊತ್ತಿನ ಪೈಕಿ ಪೂರ್ವ ಭಾಗದ ಅಳತೆ : ಪೂರ್ವ-ಪಶ್ಚಿಮ : 10 ಅಡಿ, ಉತ್ತರ-ದಕ್ಷಿಣ : 34 ಅಡಿವುಳ್ಳ ಸೊತ್ತಿಗೆ ಸಂಬಂಧಪಟ್ಟ ನಮ್ಮ ತಾಯಿಯವರಾದ ಶ್ರೀಮತಿ ಹೆಚ್. ಪಾರ್ವತಮ್ಮ ಕೋಂ ಸಿದ್ದಲಿಂಗಯ್ಯ ಇವರ ಹೆಸರಿಗೆ ಈ ಹಿಂದೆ ದಿನಾಂಕ : 14.03.1980ರಂದು ದಾವಣಗೆರೆ ಸಬ್ ರಿಜಿಸ್ಟ್ರಾರ್‌ರವರ ಆಫೀಸಿನಲ್ಲಿ 4992/79-80ನೇ ನಂಬರಾಗಿ ರಿಜಿಸ್ಟರ್ ಆಗಿರುವ ಮೂಲ ಕ್ರಯಪತ್ರವನ್ನು ನಾನು ಇತ್ತೀಚೆಗೆ ಕಳೆದುಕೊಂಡಿರುತ್ತೇನೆ.

ಸದರಿ ಮೂಲಕ ಕ್ರಯಪತ್ರವನ್ನು ಎಷ್ಟು ಹುಡುಕಿದರೂ, ಪ್ರಯತ್ನಿಸಿದರೂ ಸಿಕ್ಕಿರುವುದಿಲ್ಲ. ಸದರಿ ಪತ್ರವು ಯಾರಿಗಾದರೂ ಸಿಕ್ಕಲ್ಲಿ ಅಂತಹವರು ಈ ಕೆಳಗಿನ ವಿಳಾಸಕ್ಕೆ ತಂದುಕೊಡಬೇಕಾಗಿ ವಿನಂತಿಸಿಕೊಳ್ಳುತ್ತೇನೆ.

**ಇಂದ,**
**ಶ್ರೀ ಹೆಚ್.ಎಂ. ಸಿದ್ದಯ್ಯ ಬಿನ್ ಲೇಟ್ ಹೆಚ್.ಎಂ. ಸಿದ್ದಲಿಂಗಯ್ಯ**
**ಡೋರ್ ನಂ. 1058/1,4ನೇ ಕ್ರಾಸ್, 2ನೇ ಮೇನ್,**
**ವಿನೋಬ ನಗರ, ದಾವಣಗೆರೆ ಸಿಟಿ**
**ಮೊ. : 9844336916, 9844161543**
**ದಿನಾಂಕ : 11.6.2024**


## ಕಕ್ಕರಗೊಳ್ಳದ ಗುರುಮೂರ್ತಿ ಐರಣಿ ನಿಧನ



ದಾವಣಗೆರೆ ತಾ. ಕಕ್ಕರಗೊಳ್ಳ ಗ್ರಾಮದ ವಾಸಿ ಗುರುಮೂರ್ತಿ ಐರಣಿ (59) ಇವರು ಬೆಂಗಳೂರಿನ ಆರ್.ಆರ್.ನಗರದ ಖಾಸಗಿ ಆಸ್ಪತ್ರೆಯಲ್ಲಿ ದಿನಾಂಕ 12.06.2024ರ ಬುಧವಾರ ಸಂಜೆ ನಿಧನರಾಗಿದ್ದಾರೆ. ಮೃತರು ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ, ಅಳಿಯ, ಸೊಸೆ ಹಾಗೂ ಮೊಮ್ಮಕ್ಕಳು, ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 13.6.2024ರ ಗುರುವಾರ ಮಧ್ಯಾಹ್ನ 1 ಕ್ಕೆ ದಾವಣಗೆರೆ ತಾ. ಕಕ್ಕರಗೊಳ್ಳ ಗ್ರಾಮದ ರುದ್ರಭೂಮಿಯಲ್ಲಿ ನಡೆಯಲಿದೆ.

## ರಾಜ್ಯ ಸರ್ಕಾರಿ ನೌಕರರಿಗೆ ಇಂದು ಸಿಹಿ ಸುದ್ದಿ ನಿರೀಕ್ಷೆ

**(1ನೇ ಪುಟದಿಂದ)** ಮಾಡುವಂತೆಯೂ ಗರಿಷ್ಠ ವೇತನ 2,41,200 ರೂ.ಗೆ ನಿಗದಿ ಪಡಿಸಬೇಕೆಂದು ತನ್ನ ವರದಿಯಲ್ಲಿ ಶಿಫಾರ್ಸು ಮಾಡಿದೆ.

ಮಾಜಿ ಮುಖ್ಯಕಾರ್ಯದರ್ಶಿ ಕೆ.ಸುಧಾಕರ್ ನೇತೃತ್ವದ ವೇತನ ಆಯೋಗವು ನೌಕರರ ಅನುಕೂಲಕ್ಕಾಗಿ 30 ಶಿಫಾರಸ್ಸುಗಳಲ್ಲಿ ಹಲವು ಸೌಲಭ್ಯಗಳಿಗೆ ಶಿಫಾರಸ್ಸು ಮಾಡಿದೆ.

## ಯಡಿಯೂರಪ್ಪಗೆ ನೋಟಿಸ್

**(1ನೇ ಪುಟದಿಂದ)** ಆಸ್ಪತ್ರೆಯಲ್ಲಿ ಸಾವನ್ನಪ್ಪಿದ್ದರು.

ಯಡಿಯೂರಪ್ಪ ತಮ್ಮ ವಿರುದ್ಧದ ಆರೋಪ ತಳ್ಳಿ ಹಾಕಿದ್ದು, ಈ ಬಗ್ಗೆ ಕಾನೂನು ಹೋರಾಟ ನಡೆಸುವುದಾಗಿ ಹೇಳಿದ್ದಾರೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸಂತ್ರಸ್ತೆ ಹಾಗೂ ಅವರ ತಾಯಿಯ ಹೇಳಿಕೆಯನ್ನು ಪೊಲೀಸರು ಈಗಾಗಲೇ ದಾಖಲಿಸಿಕೊಂಡಿದ್ದಾರೆ.

## 24ರಿಂದ ಸಂಸತ್ ಅಧಿವೇಶನ

**(1ನೇ ಪುಟದಿಂದ)** ಅಧಿವೇಶನವನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ಜುಲೈ 3ರಂದು ಅಧಿವೇಶನ ಪೂರ್ಣಗೊಳ್ಳಲಿದೆ. ಮೊದಲ ಮೂರು ದಿನಗಳಲ್ಲಿ ನೂತನ ಸಂಸದರು ಪ್ರಮಾಣ ವಚನ ಸ್ವೀಕರಿಸಲಿದ್ದಾರೆ ಹಾಗೂ ಲೋಕಸಭಾಧ್ಯಕ್ಷರ ಆಯ್ಕೆ ಮಾಡಲಿದ್ದಾರೆ.

ಜುಲೈ ಮೂರನೇ ವಾರದಲ್ಲಿ ಮತ್ತೆ ಅಧಿವೇಶನ ಮುಂದುವರೆಯಲಿದ್ದು, ಕೇಂದ್ರ ಬಜೆಟ್ ಮಂಡಿಸಲಾಗುವುದು.

ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಸತತ ಏಳನೇ ಬಾರಿಗೆ ಬಜೆಟ್ ಮಂಡಿಸಲಿದ್ದಾರೆ. ಈ ಮೂಲಕ ಸತತ ಆರು ಬಜೆಟ್ ಮಂಡಿಸಿದ ಮೊರಾರ್ಜಿ ದೇಸಾಯಿ ಅವರ ದಾಖಲೆ ಮುರಿಯಲಿದ್ದಾರೆ.

## ಪ್ರಜ್ವಲ್ ರೇವಣ್ಣ ಎಸ್.ಐ.ಟಿ. ಕಸ್ಟಡಿಗೆ

**(1ನೇ ಪುಟದಿಂದ)** ಜೂನ್ 10ರಂದು ನ್ಯಾಯಾಲಯ 14 ದಿನಗಳ ನ್ಯಾಯಾಂಗ ಕಸ್ಟಡಿಗೆ ನೀಡಿತ್ತು. ಆದರೆ, ಸೈಬರ್ ಅಪರಾಧ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಜ್ವಲ್ ವಿರುದ್ಧ ಬಾಡಿ ವಾರಂಟ್ ಅಗತ್ಯವಿದೆ ಎಂದು ವಿಶೇಷ ತನಿಖಾ ತಂಡ ಮನವಿ ನೀಡಿದ ನಂತರ ಈ ಕ್ರಮ ತೆಗೆದುಕೊಳ್ಳಲಾಗಿದೆ.

## ಕೋರ್ಟ್ ಆವರಣದಲ್ಲಿ ಪಾಕ್ ಪರ ಘೋಷಣೆ

ಬೆಳಗಾವಿ, ಜೂ. 12 – ಬಂಧಿತ ಭೂಗತ ಜಯೇಶ್ ಪೂಜಾರಿ ಇಲ್ಲಿನ ನ್ಯಾಯಾಲಯದ ಆವರಣದಲ್ಲಿ ಪಾಕಿಸ್ತಾನದ ಪರ ಘೋಷಣೆ ಕೂಗಿದ್ದಾನೆ. ಆತನ ವಿರುದ್ಧದ ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದ ಎದುರು ಹಾಜರು ಪಡಿಸಲಾಗಿತ್ತು. ಪಾಕ್ ಪರ ಘೋಷಣೆ ಕೂಗಿದ ಆತನಿಗೆ ಅಲ್ಲಿದ್ದ ಜನರು ಹಾಗೂ ವಕೀಲರು ಥಳಿಸಿದ್ದಾರೆ.

ಆತ ಏಕೆ ಪಾಕ್ ಪರ ಘೋಷಣೆ ಕೂಗಿದ ಎಂಬುದು ಸ್ಪಷ್ಟವಾಗಿಲ್ಲ. ನಾವು ತನಿಖೆ ನಡೆಸುತ್ತಿದ್ದೇವೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

2018ರ ಪ್ರಕರಣಕ್ಕೆ ಸಂಬಂಧಿಸಿದಂತೆ ಆತನನ್ನು ವಿಚಾರಣೆಗೆ ತರಲಾಗಿತ್ತು. ಭೂಗತನನ್ನು ಹಿಂಡಲಗ ಕೇಂದ್ರ ಬಂಧೀಖಾನೆಯಲ್ಲಿ ಇರಿಸಲಾಗಿದೆ.

ಪೂಜಾರಿ ಈ ಹಿಂದೆ ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರಿಗೆ ಬೆದರಿಸಿ ಹಣ ಕೇಳುವ ದೂರವಾಣಿ ಕರೆ ಮಾಡಿದ್ದ ಎಂದು ಪೊಲೀಸರು ತಿಳಿಸಿದ್ದರು.

## ಇನ್ನೂ ನಾಲ್ವರು ಆರೋಪಿಗಳು

**(1ನೇ ಪುಟದಿಂದ)** ಈ ಪ್ರಕರಣದಲ್ಲಿ ಪ್ರಥಮ ಆರೋಪಿ ಪವಿತ್ರ ಗೌಡ ಹಾಗೂ ಎರಡನೇ ಆರೋಪಿ ದರ್ಶನ್ ಎಂದೂ ಪೊಲೀಸರು ಗುರುತಿಸಿದ್ದಾರೆ.

ಈ ನಡುವೆ ಹೇಳಿಕೆ ನೀಡಿರುವ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಎನ್.ಎಂ. ಸುರೇಶ್, ದರ್ಶನ್ ವಿರುದ್ಧ ಕ್ರಮ ತೆಗೆದುಕೊಳ್ಳುವ ಬಗ್ಗೆ ಕಲಾವಿದರ ಸಂಘದ ಜೊತೆ ಚರ್ಚಿಸಿ ನಿರ್ಧರಿಸಲಾಗುವುದು ಎಂದಿದ್ದಾರೆ.

ಪೊಲೀಸರು ಆರೋಪ ಪಟ್ಟಿ ದಾಖಲಿಸಿದ ನಂತರವೇ ದರ್ಶನ್ ಕುರಿತು ನಿರ್ಧರಿಸಲಾಗುವುದು ಎಂದವರು ಇಂಗಿತ ವ್ಯಕ್ತಪಡಿಸಿದ್ದಾರೆ.

## ವಿದ್ಯಾರ್ಥಿಗಳ ಸ್ವಾವಲಂಬನೆಗೆ ಕೌಶಲ್ಯ ತರಬೇತಿ ಅಗತ್ಯ

### ಊಟದ ತಟ್ಟೆಗಳ ವಿತರಣೆ ಕಾರ್ಯಕ್ರಮದಲ್ಲಿ ಶಾಸಕ ಪ್ರಕಾಶ ಕೋಳಿವಾಡ



**ರಾಣೇಬೆನ್ನೂರು**

ರಾಣೇಬೆನ್ನೂರು, ಜೂ.12- ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳಿಗೆ ಓದನ್ನು ಬರೀ ಜ್ಞಾನಾರ್ಜನೆಗೆ ಸೀಮಿತಗೊಳಿಸದೇ ಕೌಶಲ್ಯ ತರಬೇತಿ, ಸ್ಪೋಕನ್ ಇಂಗ್ಲಿಷ್ ತರಬೇತಿಯನ್ನೂ ನೀಡಿ, ಅವರು ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು ಶಿಕ್ಷಕರು ಸಹಾಯ ಮಾಡಬೇಕು ಎಂದು ಶಾಸಕ ಪ್ರಕಾಶ ಕೋಳಿವಾಡ ಹೇಳಿದರು.

ನಗರದ 7ನೇ ನಂಬರ್ ಸರ್ಕಾರಿ ಶಾಲೆಯ ಮಕ್ಕಳಿಗೆ ಸಾಯಿ ರಾಘವೇಂದ್ರ ಸೇವಾ ಸಮಿತಿ ವತಿಯಿಂದ ಕೊಡಮಾಡಲಾದ ತಟ್ಟೆಗಳನ್ನು ವಿತರಿಸಿ ಶಾಸಕರು ಮಾತನಾಡುತ್ತಿದ್ದರು. ಹೀಗೆ ಕೌಶಲ್ಯ ತರಬೇತಿ ನೀಡುವ ಮೂಲಕ ಶಿಕ್ಷಣಕ್ಕೆ ಪ್ರಾಧಾನ್ಯತೆ ನೀಡಿದರೆ, ಭಾರತ ವಿಶ್ವಗುರು ಸ್ಥಾನ ಪಡೆಯಲು ಸಾಧ್ಯವೆಂದು ಅವರು ಹೇಳಿದರು.

ತಾಲ್ಲೂಕಿನ 50 ಸರ್ಕಾರಿ ಶಾಲೆಗಳನ್ನು ದತ್ತು ಪಡೆದು ಮೂಲ ಸೌಕರ್ಯಗಳೊಂದಿಗೆ ಕಂಪ್ಯೂಟರ್ ಶಿಕ್ಷಣ ಹಾಗೂ ಡಿಜಿಟಲ್ ಗ್ರಂಥಾಲಯ ಒದಗಿಸುವ ಹಾಗೂ ನಿರುದ್ಯೋಗ ನಿವಾರಣೆಗೆ ಕೈಗಾರಿಕೆಗಳ ಸ್ಥಾಪನೆಯ ಚಿಂತನೆ ನಡೆಸಿದ್ದು, ಶೀಘ್ರದಲ್ಲಿಯೇ ಕಾರ್ಯೋನ್ಮುಖವಾಗಲಿದೆ ಎಂದು ಶಾಸ ಕರು ಹೇಳಿದರು.

ಸಮಿತಿ ಅಧ್ಯಕ್ಷೆ ಪ್ರೇಮ ಬೆಂಗಳೂರು ಮಾತನಾಡಿ, ತಮ್ಮ ಸಂಸ್ಥೆ ಈಗಾಗಲೇ ಐದು ವಿದ್ಯಾರ್ಥಿಗಳನ್ನ ದತ್ತು ಪಡೆದಿದ್ದು ಅವರ ಸಂಪೂರ್ಣ ಶಿಕ್ಷಣದ ಹೊಣೆ ಹೊತ್ತಿದೆ ಎಂದರು. ಜಯಶ್ರೀ ಬೆಂಗಳೂರು, ಸಿದ್ದಣ್ಣ ಅಂಬಲಿ, ರಕ್ಷಣಾ ವೇದಿಕೆಯ ಗಣೇಶ ಗೋಣಿಬಸಣ್ಣ, ಮಾರುತಿ ಮುಂಡರಗಿ, ರೇಣುಕಾ ಲಮಾಣಿ, ಕವಿತಾ ಮತ್ತಿತರರಿದ್ದರು.

# ದರ್ಶನ್ ರಕ್ಷಣೆಗೆ ಯಾವ ರಾಜಕಾರಣಿಯೂ ಪ್ರಯತ್ನ ನಡೆಸಿಲ್ಲ



ಬೆಂಗಳೂರು, ಜೂ. 12 - ಕೊಲೆ ಆರೋಪ ಎದುರಿಸುತ್ತಿರುವ ನಟ ದರ್ಶನ್ ರಕ್ಷಣೆಗೆ ಯಾವ ರಾಜಕಾರಣಿಯೂ ಪ್ರಯತ್ನ ಮಾಡಿಲ್ಲ, ಸರ್ಕಾರದಿಂದ ನಾವ್ಯಾರೂ ಮಧ್ಯ ಪ್ರವೇಶಿಸುವುದಿಲ್ಲ, ಮುಕ್ತವಾಗಿ ತನಿಖೆ ನಡೆಸಲು ಪೊಲೀಸರಿಗೆ ಅವಕಾಶವಿದೆ ಎಂದು ಗೃಹ ಸಚಿವ ಜಿ.ಪರಮೇಶ್ವರ್ ಇಂದಿಲ್ಲಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾನೂನಿನಲ್ಲಿ ಏನೆಲ್ಲ ಕ್ರಮ ತೆಗೆದುಕೊಳ್ಳಲು ಅವಕಾಶವಿದೆಯೋ ಅದನ್ನು ಪೊಲೀಸರು ಮಾಡುತ್ತಾರೆ. ಎಲ್ಲರಿಗೂ ಕಾನೂನು ಒಂದೇ. ನಟ ದರ್ಶನ್‌ಗೂ ಒಂದೇ ಕಾನೂನು, ಪರಮೇಶ್ವರ್‌ಗೂ ಒಂದೇ ಕಾನೂನು, ಯಾರೂ ಸಹ ಕಾನೂನು ಕೈಗೆತ್ತಿಕೊಳ್ಳಬಾರದು ಎಂದರು.

ರೇಣುಕಾಸ್ವಾಮಿ ಸಾಮಾಜಿಕ ಜಾಲತಾಣದಲ್ಲಿ ನಟ ದರ್ಶನ್ ಅವರ ಆಪ್ತೆ ಬಗ್ಗೆ ಕೆಟ್ಟದಾಗಿ ಕಾಮೆಂಟ್ ಮಾಡಿದ್ದ ಎನ್ನಲಾಗಿದೆ. ಈ ಬಗ್ಗೆ ದರ್ಶನ್ ದೂರು ಕೊಡಬಹುದಾಗಿತ್ತು, ಪೊಲೀಸರು ಕೂಡಲೇ ಕ್ರಮ ತೆಗೆದುಕೊಳ್ಳುತ್ತಿದ್ದರು. ಅದನ್ನು ಬಿಟ್ಟು, ರೇಣುಕಾಸ್ವಾಮಿಯನ್ನು ಕರೆದುಕೊಂಡು ಬಂದು ಹೊಡೆದು ಸಾಯಿಸಿದ್ದಾರೆ ಎಂಬ ಮಾಹಿತಿ ಇದೆ ಎಂದು ಹೇಳಿದರು.

ದೂರು ಕೊಟ್ಟಿದ್ದರೆ ಇದೆಲ್ಲವನ್ನು ತಡೆಯಲು ಅವಕಾಶವಿತ್ತು, ಆದರೆ, ಘಟನೆ ನಡೆದು ಹೋಗಿದೆ, ಯಾರೂ ಏನೂ ಮಾಡಲು ಆಗುವುದಿಲ್ಲ, ತನಿಖೆಯಲ್ಲಿ ಬರುವ ಅಂಶಗಳನ್ನು ಆಧರಿಸಿ ಕಾನೂನು ಪ್ರಕಾರ ಇಲಾಖೆ ಕ್ರಮ ತೆಗೆದುಕೊಳ್ಳುತ್ತದೆ ಎಂದು ತಿಳಿಸಿದರು.

ಕೊಲೆಯಾದ ರೇಣುಕಾಸ್ವಾಮಿ ಕುಟುಂಬ ವರ್ಗದ ಕುರಿತು ಮುಖ್ಯಮಂತ್ರಿ ಅವರೊಂದಿಗೆ ಚರ್ಚಿಸುತ್ತೇನೆ, ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸುವ ಅಗತ್ಯವಿಲ್ಲ, ಪ್ರಕರಣದಲ್ಲಿ ಭಾಗಿಯಾಗಿದ್ದ 13 ಜನರನ್ನು ಈಗಾಗಲೇ ಬಂಧಿಸಲಾಗಿದೆ, ಪ್ರಕರಣದ ತನಿಖೆಯನ್ನು ಬೇರೆ ಏಜೆನ್ಸಿಗೆ ಕೊಡುವ ಅಗತ್ಯವಿಲ್ಲ.

ತನಿಖೆ ಪೂರ್ಣಗೊಂಡ ನಂತರ ಎಲ್ಲ ಮಾಹಿತಿ ಗೊತ್ತಾಗುತ್ತದೆ, ಅಲ್ಲಿಯವರೆಗೆ ಈ ಬಗ್ಗೆ ಅಧಿಕಾರಿಗಳನ್ನು ನಾವು ಕೇಳುವುದಿಲ್ಲ, ಅವರೂ ನಮಗೆ ಹೇಳುವುದಿಲ್ಲ ಎಂದರು.

ನಟ ದರ್ಶನ್ ಅವರ ಘಟನೆಗಳು ಇದೇ ಮೊದಲಲ್ಲ, ಮಾಧ್ಯಮಗಳಲ್ಲಿ ಬಂದಿರುವುದನ್ನು ಗಮನಿಸಿದ್ದೇನೆ. ಪೊಲೀಸರು ತನಿಖೆ ಮಾಡುತ್ತಾರೆ, ತನಿಖೆ ನಂತರ ವರದಿಯಲ್ಲಿ ಏನು ಶಿಫಾರಸ್ಸು ಮಾಡುತ್ತಾರೋ ನೋಡಬೇಕು. ಪೊಲೀಸರಿಗೆ ಫ್ರೀಹ್ಯಾಂಡ್ ಇದೆ, ಸೆಕ್ಷನ್ ಹಾಕುವುದಕ್ಕೆ ಅವರು ಸಮರ್ಥರು. ನಮ್ಮನ್ನು ಕೇಳಿ ಸೆಕ್ಷನ್ ಹಾಕುವುದಿಲ್ಲ ಎಂದರು.

ಪೊಲೀಸರ ಅಂತರ್ ಜಿಲ್ಲಾ ವರ್ಗಾವಣೆ ಶಿಸ್ತು ಬದ್ಧವಾಗಿ ನಿಯಮದ ಚೌಕಟ್ಟಿನಲ್ಲಿ ನಡೆಯಬೇಕಾಗುತ್ತದೆ. ಪೊಲೀಸ್ ಇಲಾಖೆ ಶಿಸ್ತಿನ ಇಲಾಖೆ, ಪೋರ್ಟಲ್ ಅರ್ಜಿಗಳು ನಿಯಮದ ಪ್ರಕಾರ ಆಗುತ್ತವೆ ಎಂದವರು ಇದೇ ಸಂದರ್ಭದಲ್ಲಿ ಹೇಳಿದರು.

ಪೊಲೀಸ್ ವರ್ಗಾವಣೆಗೆ ಸಂಬಂಧಿಸಿದಂತೆ ಕೆಲವು ನಿಯಮಗಳಿವೆ, ಅವನ್ನು ಮೀರಿ ವರ್ಗಾವಣೆ ಮಾಡಲು ಆಗುವುದಿಲ್ಲ, ಹಾಗೆ ಮಾಡಬೇಕಾದರೆ ನಿಯಮಗಳನ್ನು ಬದಲಾಯಿಸಬೇಕಾಗುತ್ತದೆ.

ಪೊಲೀಸ್ ಅಧಿಕಾರಿಗಳ ವರ್ಗಾವಣೆಗೆ ಒಂದು ವರ್ಷದ ನಿಯಮವಿತ್ತು, ಸದನದಲ್ಲಿ ಕಾನೂನು ಬದಲಾಯಿಸಿ ಎರಡು ವರ್ಷ ಮಾಡಲಾಗಿದೆ. ಇರುವಂತಹ ನಿಯಮ ಉಲ್ಲಂಘನೆ ಮಾಡಿ, ವರ್ಗಾವಣೆ ಮಾಡುವುದಕ್ಕೆ ಅವಕಾಶವಿಲ್ಲ. ಡಿಜಿಯಾಗಲಿ, ನಾನಾಗಲೀ ಅಥವಾ ಯಾರೇ ಆಗಲೀ ಕಾನೂನು ಚೌಕಟ್ಟಿನಲ್ಲಿ ಕೆಲಸ ಮಾಡಬೇಕಾಗುತ್ತದೆ ಎಂದು ಪರಮೇಶ್ವರ್ ಹೇಳಿದರು.

ವರ್ಗಾವಣೆಗೆ ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಿರುವುದಕ್ಕೆ ಸಿಬ್ಬಂದಿಗಳಿಗೆ ಸಣ್ಣಪುಟ್ಟ ತೊಂದರೆಗಳು ಆಗಿದ್ದರೆ ಸರಿಪಡಿಸುವುದಕ್ಕೆ ಸೂಚನೆ ನೀಡಲಾಗುವುದು, ಅವರಿಗೂ ಕುಟುಂಬಗಳಿವೆ, ಇದನ್ನು ಅರ್ಥ ಮಾಡಿಕೊಂಡು ಕೆಲಸ ಮಾಡಬೇಕಾಗುತ್ತದೆ ಎಂದರು.

545 ಪಿಎಸ್‌ಐ ಹುದ್ದೆಗಳ ನೇಮಕಾತಿ ಕುರಿತು ಕೋರ್ಟ್‌ನಿಂದ ಆದೇಶ ತಂದಾಗ, ನಮ್ಮ ಕೈಕಟ್ಟಿ ಹಾಕಿದಂತಾಗುತ್ತದೆ. ಪಿಎಸ್‌ಐ ಹುದ್ದೆಗಳಿಗೆ ನೇಮಕಾತಿ ಆದೇಶ ಕೊಡಬೇಕೆಂಬ ಉದ್ದೇಶದಿಂದ ಪರೀಕ್ಷೆ ಪೂರ್ಣಗೊಳಿಸಿದ್ದೇವೆ ಎಂದೂ ಪರಮೇಶ್ವರ್ ಹೇಳಿದರು.

ಈ ಹಂತದಲ್ಲಿ ಕೆಲವರು ಕೋರ್ಟ್‌ಗೆ ಹೋಗಿದ್ದಾರೆ. ಸದರಿ ಪ್ರಕರಣ ಮುಗಿದರೆ ಮುಂದಿನ ನೇಮಕಾತಿಗಳಿಗೆ ಅನುಕೂಲವಾಗುತ್ತದೆ. 545 ಪಿಎಸ್‌ಐ ಹುದ್ದೆಗಳ ನೇಮಕಾತಿ ಸಮಸ್ಯೆಯನ್ನು ಆದಷ್ಟು ಬೇಗ ಬಗೆಹರಿಸಲು ಪ್ರಯತ್ನ ಮಾಡುತ್ತಿದ್ದೇವೆ ಎಂದರು.

# ದಿನನಿತ್ಯದ ಬದುಕಿನಲ್ಲಿ ಸಕಾರಾತ್ಮಕ ಚಿಂತನೆಗಳಿರಲಿ

## ಪೊಲೀಸ್ ಅಧಿಕಾರಿ, ಸಿಬ್ಬಂದಿಗಳಿಗೆ ಕಾರ್ಯ ಒತ್ತಡ ನಿರ್ವಹಣೆ ಕಾರ್ಯಾಗಾರದಲ್ಲಿ ಮನಃಶಾಸ್ತ್ರಜ್ಞ ಡಾ. ಸುಭಾಷ್ ಚಂದ್ರನ್



ದಾವಣಗೆರೆ, ಜೂ.12- ಪ್ರತಿಯೊಬ್ಬರಲ್ಲೂ ದಿನಕ್ಕೆ 40 ರಿಂದ 80 ಸಾವಿರದವರೆಗೆ ಆಲೋಚನೆಗಳು ಮನಸ್ಸಿನಲ್ಲಿ ಮೂಡಲಿದ್ದು, ಇದರಲ್ಲಿ ಸಕಾರಾತ್ಮಕ ಚಿಂತನೆಗಳನ್ನು ಆಯ್ದುಕೊಂಡಾಗ ಮಾತ್ರ ದಿನದ ಬದುಕಿನಲ್ಲಿ ಒತ್ತಡ ಮುಕ್ತರಾಗಿ ಲವಲವಿಕೆಯಿಂದ ಇರಬಹುದೆಂದು ಮನಃಶಾಸ್ತ್ರಜ್ಞ ಡಾ. ಸುಭಾಷ್ ಚಂದ್ರನ್ ತಿಳಿಸಿದರು.

ಅವರು ಬುಧವಾರ ನಗರದ ಜಿಲ್ಲಾ ಪೊಲೀಸ್ ಕಚೇರಿ ಸಭಾಂಗಣದಲ್ಲಿ ಜಿಲ್ಲೆಯ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಕಾರ್ಯ ಒತ್ತಡ ನಿರ್ವಹಣೆ ಬಗ್ಗೆ ಒಂದು ದಿನದ ಕಾರ್ಯಾಗಾರದಲ್ಲಿ ಪೊಲೀಸ್ ಕರ್ತವ್ಯದ ಸಮಯದಲ್ಲಿ ಹಾಗೂ ವೈಯುಕ್ತಿಕ ಜೀವನದಲ್ಲಿ ಹೇಗೆ ಕಾರ್ಯ ಒತ್ತಡ ನಿರ್ವಹಣೆ ಮಾಡುವ ಬಗ್ಗೆ ಉಪನ್ಯಾಸ ನೀಡಿದರು.

ಮನುಷ್ಯನಿಗೆ ಮಲಗಿ, ಎದ್ದಾಗಿನಿಂದ ಮತ್ತೆ ರಾತ್ರಿ ಮಲಗುವವರೆಗೂ ಅನೇಕ ಚಿಂತನೆಗಳು ಬರಲಿವೆ. ಇದರಲ್ಲಿ ಕರ್ತವ್ಯದ ಸ್ಥಳ ಇರಬಹುದು, ಕುಟುಂಬದ ಮತ್ತು ನೆರೆಹೊರೆಯವರ ಹಾಗೂ ಸಂಬಂಧಿಕರ ಬಗ್ಗೆ ಆಲೋಚಗಳು ಮೂಡುತ್ತವೆ. ಇವುಗಳಲ್ಲಿ ಕೆಲವು ಭಾವನಾತ್ಮಕ, ಕೆಲವು ಸಂತೋಷ, ದುಃಖ, ಕರುಣೆ, ಪ್ರೀತಿ, ಭಕ್ತಿ ಸೇರಿದಂತೆ ಅನೇಕ ಭಾವವಿಕಾರಗಳು ಮೂಡಲಿವೆ. ಆದರೆ, ಇವುಗಳಲ್ಲಿ ಯಾವು ಸಕಾರಾತ್ಮಕವೋ ಅಂತಹ ಆಲೋಚನೆಗಳನ್ನು ಮಾತ್ರ ಪರಿಗಣಿಸಿ, ನಕಾರಾತ್ಮಕ ಚಿಂತನೆಗಳನ್ನು ಕೈಬಿಡಬೇಕು. ಕೆಲವು ಸಂದರ್ಭಗಳಲ್ಲಿ ಮಕ್ಕಳ ಬಗ್ಗೆ ಚಿಂತನೆ ಮಾಡಿ ಇತರೆಯವರಿಗೆ ಹೋಲಿಕೆ ಮಾಡುವುದುಂಟು. ಆದರೆ, ಸಾಮರ್ಥ್ಯವನ್ನು ಹೆಚ್ಚಿಸಲು ಪ್ರಯತ್ನಪಡುವ ನಿಟ್ಟಿನಲ್ಲಿ ಏನು ಮಾಡಬೇಕೆಂಬ ಆಲೋಚನೆ ಬಹಳ ಮುಖ್ಯವಾಗಿರುತ್ತದೆ ಎಂದರು.

ಒತ್ತಡಗಳಲ್ಲಿ ಕೆಲಸ ಮಾಡುವ ಸ್ಥಳಗಳಲ್ಲಿ ಒತ್ತಡಗಳನ್ನುತಲೆಬಾರವಾಗಿತೆಗೆದುಕೊಳ್ಳದೇ ಎಲ್ಲಾ ಕೆಲಸಗಳನ್ನು ಸೂಕ್ಷ್ಮವಾಗಿ ಗಮನಿಸಿ, ಸೂಕ್ಷ್ಮತೆಯಿಂದ ನಿರ್ವಹಣೆ ಮಾಡಿದಾಗ ಒತ್ತಡದ ಕೆಲಸಗಳನ್ನು ನಿರ್ವಹಿಸಲು ಸಾಧ್ಯವಾಗಲಿದೆ. ಒಟ್ಟಾರೆ ಸಕಾರಾತ್ಮಕ ಚಿಂತನೆಗಳು ಒತ್ತಡದ ಬದುಕಿನಿಂದ ಹೊರಬರಲು ಸಹಕಾರಿಯಾಗಲಿದೆ ಎಂದರು.

ಕಾರ್ಯಾಗಾರದಲ್ಲಿ ಪೊಲೀಸ್ ಅಧೀಕ್ಷಕರಾದ ಉಮಾ ಪ್ರಶಾಂತ್ ಅಧ್ಯಕ್ಷತೆ ವಹಿಸಿದ್ದರು. ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆಯ ಪ್ರಯುಕ್ತ ಪ್ರತಿಜ್ಞಾವಿಧಿ ಬೋಧಿಸಿದರು.

ಹೆಚ್ಚುವರಿ ಪೊಲೀಸ್ ಅಧೀಕ್ಷಕರಾದ ವಿಜಯಕುಮಾರ್ ಸಂತೋಷ ಮಾತನಾಡಿ, ಪೊಲೀಸ್ ಕರ್ತವ್ಯದ ಸಮಯದಲ್ಲಿ ಹಲವಾರು ಒತ್ತಡಗಳಲ್ಲಿ ಅಂದರೆ ದೈಹಿಕವಾಗಿ, ಮಾನಸಿಕವಾಗಿ ಹಲವಾರು ಒತ್ತಡಗಳಲ್ಲಿ ಕಾರ್ಯರ್ವಹಿಸಬೇಕಾಗಿರುತ್ತದೆ. ಜೊತೆಗೆ ವೈಯುಕ್ತಿಕ ಜೀವನವೂ ಕೂಡ ಬಹು ಮುಖ್ಯವಾಗಿರುತ್ತದೆ. ಇಂತಹ ಸಮಯದಲ್ಲಿ ಜೀವನ ಸಮತೋಲನವಾಗಿರಿಸಿಕೊಳ್ಳಲು ದೈಹಿಕ ಆರೋಗ್ಯದ ಜೊತೆಗೆ ಮಾನಸಿಕ ಆರೋಗ್ಯ ಕೂಡ ತುಂಬಾ ಮುಖ್ಯವಾಗಿರುತ್ತದೆ. ಆದ್ದರಿಂದ ಜಿಲ್ಲೆಯ ಪೊಲೀಸ್ ಅಧಿಕಾರಿ ಸಿಬ್ಬಂದಿಗಳಿಗೆ ಅನುಕೂಲವಾಗಲೆಂದು ಈ ಕಾರ್ಯಾಗಾರವನ್ನು ಏರ್ಪಡಿಸಿದ್ದು, ಕಾರ್ಯಾಗಾರದ ಸದುಪಯೋಗ ಪಡಿಸಿಕೊಳ್ಳಬೇಕೆಂದು ತಿಳಿಸಿದರು.

ಹೆಚ್ಚುವರಿ ಪೊಲೀಸ್ ಅಧೀಕ್ಷಕರುಗಳಾದ ಮಂಜುನಾಥ್, ನಗರ ಉಪ ವಿಭಾಗದ ಡಿವೈಎಸ್ಪಿ ಮಲ್ಲೇಶ್ ದೊಡ್ಡಮನಿ, ಪ್ರಶಾಂತ್ ಸಿದ್ದನಗೌಡರ್, ಉಜ್ಜನಿಕೊಪ್ಪ, ಬೆರಳು ಮುದ್ರೆ ಘಟಕದ ರುದ್ರೇಶ್ ಜಿಲ್ಲಾ ಪೊಲೀಸ್ ಕಚೇರಿಯ ಸಹಾಯಕ ಆಡಳಿತಾಧಿಕಾರಿ ಮೆಹಬೂಬ್ ಹಾಗೂ ಜಿಲ್ಲೆಯ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಭಾಗವಹಿಸಿದ್ದರು.

# ವಿಶೇಷ ಚೇತನ ಹಾಗೂ ಹಿರಿಯ ನಾಗರಿಕರಿಂದ ಅರ್ಜಿ

ದಾವಣಗೆರೆ, ಜೂ. 12 - ಕೇಂದ್ರ ಸರ್ಕಾರದ ಅಲಿಮ್ಕೋ ಸಂಸ್ಥೆಯಿಂದ ಅಡಿಪ್ ಯೋಜನೆಯಡಿ ವಿಕಲಚೇತನರಿಗೆ ಹಾಗೂ ರಾಷ್ಟ್ರೀಯ ವಯೋಶ್ರೀ ಯೋಜನೆಯಡಿ ಹಿರಿಯ ನಾಗರಿಕರಿಗೆ ವಿವಿಧ ಸಾಧನ ಸಲಕರಣೆಗಳನ್ನು ವಿತರಿಸಲು ಅರ್ಜಿ ಆಹ್ವಾನಿಸಲಾಗಿದೆ.

ಜಿಲ್ಲೆಯ ವಿಕಲಚೇತನರು ಹಾಗೂ ಹಿರಿಯ ನಾಗರಿಕರು ಮೌಲ್ಯಮಾಪನ ತಪಾಸಣಾ ಶಿಬಿರಕ್ಕೆ ಹಾಜರಾಗವುದಕ್ಕಾಗಿ ಅಲಿಮ್ಕೋ ಸಂಸ್ಥೆ, ಕಾವೇರಮ್ಮ ಸರ್ಕಾರಿ ಶಾಲೆ ಆವರಣ ಕೆ.ಬಿ. ಬಡಾವಣೆ, ದಾವಣಗೆರೆ ಇಲ್ಲಿ ಹೆಸರನ್ನು ನೋಂದಾಯಿಸಿಕೊಳ್ಳಬಹುದು.

ಹೆಚ್ಚಿನ ಮಾಹಿತಿಗಾಗಿ ದೂ.ಸಂ: 97936 94269, 08192-295442 ನ್ನು ಸಂಪರ್ಕಿಸಲು ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣಾಧಿಕಾರಿ ಡಾ. ಕೆ.ಕೆ. ಪ್ರಕಾಶ್ ತಿಳಿಸಿದ್ದಾರೆ.

# ನಗರದಲ್ಲಿ ಇಂದು ಕುರಿ, ಮೇಕೆ ಸಾಕಾಣಿಕೆ ತರಬೇತಿ

ಪಶುಪಾಲನಾ ಮತ್ತು ಪಶುವೈದ್ಯಕೀಯ ತರಬೇತಿ ಕೇಂದ್ರದಲ್ಲಿ ಇಂದಿನಿಂದ ಇದೇ ದಿನಾಂಕ 15ರ ವರೆಗೆ ಕುರಿ, ಮೇಕೆ ಮತ್ತು ಕೋಳಿ ಸಾಕಾಣಿಕೆ ತರಬೇತಿ ನಡೆಯಲಿದೆ. ನಾಳೆ ಶುಕ್ರವಾರ ಮತ್ತು ಶನಿವಾರ ಕೋಳಿ ಸಾಕಾಣಿಕೆ ತರಬೇತಿಯನ್ನು ಆಯೋಜಿಸಲಾಗಿದೆ. ವಿವರಕ್ಕೆ ಸಂಪರ್ಕಿಸಿ : 08192-233787.

# ಕೆಂಪು ಕೋಟೆ ಮೇಲೆ ದಾಳಿ : ಉಗ್ರನ ಕ್ಷಮಾ ಯೋಚನೆ ತಿರಸ್ಕೃತ

ನವದೆಹಲಿ, ಜೂ. 12 – ಪಾಕಿಸ್ತಾನದ ಉಗ್ರವಾದಿ ಮೊಹಮ್ಮದ್ ಆರಿಫ್ ಕ್ಷಮಾಯಾಚನೆಯ ಅರ್ಜಿಯನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ತಳ್ಳಿಹಾಕಿದ್ದಾರೆ. ಕೆಂಪು ಕೋಟೆಯ ಮೇಲೆ ನಡೆದ ಉಗ್ರವಾದಿ ದಾಳಿಯಲ್ಲಿ ಆರಿಫ್ ಭಾಗಿಯಾಗಿದ್ದ.

ರಾಷ್ಟ್ರಪತಿ ಮುರ್ಮು ಅವರು ಜುಲೈ 25, 2022ರಂದು ಅಧಿಕಾರ ವಹಿಸಿಕೊಂಡ ನಂತರ ಎರಡನೇ ಬಾರಿ ಕ್ಷಮಾ ಯಾಚನೆಯ ಅರ್ಜಿ ತಳ್ಳಿ ಹಾಕಿದ್ದಾರೆ.

ಆರಿಫ್ ಸಲ್ಲಿಸಿದ್ದ ಮರು ಪರಿಶೀಲನಾ ಅರ್ಜಿಯನ್ನು ನವೆಂಬರ್ 3, 2022ರಂದು ಸುಪ್ರೀಂ ಕೋರ್ಟ್ ತಳ್ಳಿ ಹಾಕಿತ್ತು. ರಾಷ್ಟ್ರಪತಿ ಅರ್ಜಿ ತಳ್ಳಿ ಹಾಕಿದರೂ ಸಹ, ಸುಪ್ರೀಂ ಕೋರ್ಟ್‌ನಲ್ಲಿ ಮತ್ತೆ ಅರ್ಜಿ ಸಲ್ಲಿಸಿ, ತಮ್ಮ ಅರ್ಜಿ ಇತ್ಯರ್ಥ ವಿಳಂಬವಾಗಿದೆ ಎಂದು ದೂರಲು ಅವಕಾಶ ಇದೆ ಎಂದು ಕಾನೂನು ಪರಿಣಿತರು ಹೇಳಿದ್ದಾರೆ.

ಮೇ 25ರಂದು ಆರಿಫ್ ಕ್ಷಮಾ ಯಾಚನೆಯ ಅರ್ಜಿ ದೊರೆತಿತ್ತು. ಮೇ 27ರಂದು ಅರ್ಜಿ ತಳ್ಳಿ ಹಾಕಲಾಗಿದೆ.

ಡಿಸೆಂಬರ್ 22, 2000ರಲ್ಲಿ ಕೆಂಪು ಕೋಟೆಯ ಮೇಲೆ ದಾಳಿ ನಡೆಸಲಾಗಿತ್ತು. ಇದರಿಂದ ಮೂವರು ಸೈನಿಕ ಸಿಬ್ಬಂದಿ ಸಾವನ್ನಪ್ಪಿದ್ದರು.

ದಾಳಿಯ ನಾಲ್ಕು ದಿನಗಳ ನಂತರ ಲಷ್ಕರ್ ಎ ತೊಯ್ಬಾ ಉಗ್ರವಾದಿ ಸಂಘಟನೆಯ ಆರಿಫ್‌ನನ್ನು ಬಂಧಿಸಲಾಗಿತ್ತು. 2005ರಲ್ಲಿ ಆತನಿಗೆ ವಿಚಾರಣಾ ನ್ಯಾಯಾಲಯ ಮರಣ ದಂಡನೆ ವಿಧಿಸಿತ್ತು. ನಂತರ ಹೈಕೋರ್ಟ್ ಹಾಗೂ ಸುಪ್ರೀಂ ಕೋರ್ಟ್‌ಗಳು ಮರಣ ದಂಡನೆಯನ್ನು ಎತ್ತಿ ಹಿಡಿದಿದ್ದವು.

# ಮಾತೃದೇವೋ ಟ್ರಸ್ಟ್‌ನಿಂದ ಬೀದಿಬದಿ ತರಕಾರಿ ವ್ಯಾಪಾರಿಗಳಿಗೆ ಛತ್ರಿ ವಿತರಣೆ



ದಾವಣಗೆರೆ, ಜೂ. 12- ಮಾತೃ ದೇವೋ ಸಮಾಜ ಕಲ್ಯಾಣ ಮತ್ತು ಶೈಕ್ಷಣಿಕ ಚಾರಿಟೇಬಲ್ ಟ್ರಸ್ಟ್ ನಾಲ್ಕನೇ ವರ್ಷದ ವಾರ್ಷಿಕೋತ್ಸವದ ಅಂಗವಾಗಿ 32ನೇ ವಾರ್ಡ್, ಜಯನಗರ, ಕರಿಯಮ್ಮ ದೇವಸ್ಥಾನದ ಹತ್ತಿರ ಇರುವ ಬೀದಿ ಬದಿ ತರಕಾರಿ ವ್ಯಾಪಾರಿಗಳಿಗೆ ಛತ್ರಿ ವಿತರಣೆ ಮಾಡಲಾಯಿತು. ಫಲಾನುಭವಿಗಳು ಮಳೆಗಾಲ ಇರುವುದರಿಂದ ನೀವು ಕೊಟ್ಟ ಛತ್ರಿ ತುಂಬಾ ಸಹಾಯವಾಗಿರುತ್ತದೆ ಎಂದು ಮಾತೃದೇವೋ ಟ್ರಸ್ಟ್‌ಗೆ ಅಭಿನಂದನೆ ಸಲ್ಲಿಸಿದರು.

# ನೀಟ್ ಅರ್ಜಿಗಳನ್ನು ಸುಪ್ರೀಂ ಕೋರ್ಟ್‌ಗೆ ವರ್ಗಾಯಿಸಲು ಮನವಿ

ನವದೆಹಲಿ, ಜೂ. 12 ನೀಟ್ ಪರೀಕ್ಷೆಯ ಕೃಪಾಂಕ, ಪ್ರಶ್ನೆಪತ್ರಿಕೆ ಸೋರಿಕೆ ಹಾಗೂ ಉತ್ತರ ಪತ್ರಿಕೆಗಳ ಮೌಲ್ಯಮಾಪನದಲ್ಲಿ ಲೋಪಗಳಾಗಿರುವ ಬಗ್ಗೆ ಹೈಕೋರ್ಟ್‌ಗಳಲ್ಲಿ ದಾಖಲಾಗಿರುವ ಅರ್ಜಿಗಳನ್ನು ಸುಪ್ರೀಂ ಕೋರ್ಟ್‌ಗೆ ವರ್ಗಾಯಿಸಬೇಕೆಂದು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್.ಟಿ.ಎ.) ಅರ್ಜಿ ದಾಖಲಿಸಿದೆ.

ಸುಪ್ರೀಂ ಕೋರ್ಟ್ ಎದುರು ಹಾಜರಿದ್ದ ಸಾಲಿಸಿಟರ್ ಜನರಲ್ ತುಶಾರ್ ಮೆಹ್ತ, ವಿವಿಧ ಹೈಕೋರ್ಟ್‌ಗಳಲ್ಲಿ ನೀಟ್ ಪರೀಕ್ಷೆಗೆ ಸಂಬಂಧಿಸಿದಂತೆ ಏಳು ಅರ್ಜಿಗಳನ್ನು ದಾಖಲಿಸಲಾಗಿದೆ. ಕೆಲವು ಅರ್ಜಿಗಳು ಸುಪ್ರೀಂ ಕೋರ್ಟ್‌ನಲ್ಲಿವೆ. ಈ ಹಿನ್ನೆಲೆಯಲ್ಲಿ ಹೈಕೋರ್ಟ್‌ನಲ್ಲಿರುವ ಅರ್ಜಿಗಳನ್ನು ಸುಪ್ರೀಂ ಕೋರ್ಟ್‌ಗೆ ವರ್ಗಾಯಿಸಿಕೊಳ್ಳಬೇಕೆಂದು ಮನವಿ ಮಾಡಿದರು.

ಈ ನಡುವೆ, ನ್ಯಾಯಮೂರ್ತಿಗಳಾದ ನೀನಾ ಬನ್ಸಲ್ ಕೃಷ್ಣ ಅವರ ಪೀಠವು ಎನ್.ಟಿ.ಎ.ಗೆ ನೋಟಿಸ್ ಕಳಿಸಿದ್ದು, ನಾಲ್ವರು ನೀಟ್ ಅಭ್ಯರ್ಥಿಗಳು ದಾಖಲಿಸಿರುವ ಅರ್ಜಿಗೆ ಪ್ರತಿಕ್ರಿಯೆ ಸಲ್ಲಿಸುವಂತೆ ತಿಳಿಸಿದೆ.

# ಬಂಜೆತನ: ಮಗು ಪಡೆಯಲು ಆತಂಕ ಬೇಕಿಲ್ಲ

## ವಿವೇಕ ಪೋಷಕರ ಆರೋಗ್ಯ ಕಾರ್ಯಾಗಾರದಲ್ಲಿ ಡಾ.ಸವಿತಾ ಮಹೇಶ್

ದಾವಣಗೆರೆ, ಜೂ.12- ವೈದ್ಯಕೀಯ ಕ್ಷೇತ್ರದಲ್ಲಿನ ಹೊಸ ಆವಿಷ್ಕಾರ ಮತ್ತು ಸಂಶೋಧನೆಗಳಿಂದಾಗಿ ಬಂಜೆತನ ನಿವಾರಣೆಗೆ ಅಗತ್ಯ ಚಿಕಿತ್ಸಾ ವಿಧಾನ ಇದ್ದು ಮಗು ಪಡೆಯಲು ಆತಂಕ ಪಡಬೇಕಾಗಿಲ್ಲ ಎಂದು ಸಂತಾನ ಫರ್ಟಿಲಿಟಿ ಸೆಂಟರ್‌ನ ಐವಿಎಫ್ ತಜ್ಞರಾದ ಡಾ.ಸವಿತಾ ಮಹೇಶ್ ತಿಳಿಸಿದರು.

ನಗರದ ಬಾಪೂಜಿ ಮಕ್ಕಳ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದಲ್ಲಿ ಈಚೆಗೆ ಜರುಗಿದ ವಿವೇಕ ಪೋಷಕರ ಆರೋಗ್ಯ ಕಾರ್ಯಾಗಾರದಲ್ಲಿ 'ಬಂಜೆತನ ಕಾರಣಗಳು, ಚಿಕಿತ್ಸೆ ಮತ್ತು ನಿವಾರಣೆ' ಎಂಬ ವಿಷಯ ಕುರಿತು ಅವರು ಉಪನ್ಯಾಸ ನೀಡಿದರು.

ದಂಪತಿಗಳು 12 ತಿಂಗಳು ಗರ್ಭ ನಿರೋಧಕ ರಹಿತ ಸಂಪರ್ಕ ಹೊಂದಿದ್ದು, ಮಕ್ಕಳಾಗದಿದ್ದಾಗ ಮತ್ತು ಮಹಿಳೆಗೆ ವಯಸ್ಸಾದಂತೆ ಅಂಡಾಣುವಿನ ಗುಣಮಟ್ಟ ಇಳಿಯುತ್ತದೆ. ಮಹಿಳೆಯು ಗರ್ಭವನ್ನು ಅಂತಿಮ ಘಟ್ಟದವರೆಗೆ ಒಯ್ಯಲು ವಿಫಲಳಾದಾಗ ಬಂಜೆತನ ಎನ್ನಲಾಗುತ್ತದೆ. ಬಂಜೆತನಕ್ಕೆ ಹೆಣ್ಣು ಮತ್ತು ಗಂಡು ಇಬ್ಬರೂ ಸಮ ಕಾರಣರಾಗಿರುತ್ತಾರೆ.

ಅಂಡೋತ್ಪತ್ತಿಯಲ್ಲಿ ತೊಂದರೆ, ಡಿಂಬನಾಳದ ಪ್ರತಿಬಂಧಕತೆ, ಪುರುಷ ಸಂಬಂಧಿ ಬಂಜೆತನ, ವಯಸ್ಸಿಗೆ ಸಂಬಂಧಿಸಿದ ಅಂಶಗಳು, ಗರ್ಭಕೋಶದ ತೊಂದರೆ, ಹಿಂದಿನ ಸಂತಾನಹರಣ ಶಸ್ತ್ರಚಿಕಿತ್ಸೆ ಮತ್ತು ಕೆಲವು ವಿವರಿಸಲಾಗದ ಅಂಶಗಳು ಬಂಜೆತನಕ್ಕೆ ಕಾರಣವಾಗುತ್ತವೆ.

ಆಸ್ಪತ್ರೆಯಲ್ಲಿ ಬಂಜೆತನದಿಂದ ಬಳಲುತ್ತಿರುವ ವ್ಯಕ್ತಿಗಳಿಗೆ ಅನೇಕ ಸೌಲಭ್ಯಗಳಿವೆ. ಪುರುಷನ ನಿಸ್ಸತ್ವದ ರೇತಸ್ಸಿನಲ್ಲಿ ಸತ್ವಯುತವಾದ ಚಟುವಟಿಕೆಯಿಂದ ಕೂಡಿರುವ ವೀರ್ಯಾಣುವನ್ನು ಹುಡುಕಿ ಅದನ್ನು ಹೆಂಡತಿಯ ಗರ್ಭದಲ್ಲಿ ಹಾಕಲಾಗುತ್ತದೆ. ಈ ವಿಧಾನದಲ್ಲಿ ವೀರ್ಯಾಣು ಮೊಟ್ಟೆಯನ್ನು ಕೂಡುವ ಸಂಭವ ಹೆಚ್ಚು. ಈ ವಿಧಾನವನ್ನು ಮತ್ತೆ ಮತ್ತೆ ಪುನರಾವರ್ತಿಸಬಹುದು. ರೇತಸ್ಸಿನ ಗುಣಮಟ್ಟ ತೀರಾ ಕಳಪೆಯಾಗಿದ್ದಲ್ಲಿ ಐಸಿಎಸ್‌ಐ ಮಾಡುವುದು ಒಳ್ಳೆಯದು ಇದರಿಂದ ಶೇ 15ರಿಂದ 20ರವರೆಗೆ ಯಶಸ್ಸು ಸಾಧಿಸಬಹುದು ಎಂದು ಅವರು ವಿವರಿಸಿದರು.

ಒಂದು ವೇಳೆ ಗಂಡನು ವೀರ್ಯಾಣು ಹುಟ್ಟಿಸಲು ಅಸಮರ್ಥನಾದರೆ ಅಂತಹ ದಂಪತಿಗಳು ದಾನಿಗಳಿಂದಲೂ ಗರ್ಭಧಾರಣೆಯನ್ನು ಆಯ್ಕೆ ಮಾಡಿಕೊಳ್ಳಬಹುದಾಗಿದೆ. ಆರೋಗ್ಯವಂತ, ಬುದ್ದಿವಂತ ಸ್ವಯಂಪ್ರೇರಿತ ದಾನಿಗಳನ್ನು ಗುರುತಿಸಿ ಅವರ ವೀರ್ಯಾಣುವನ್ನು ತೆಗೆದು ಶೈತ್ಯಾಗಾರದಲ್ಲಿ ಸಂರಕ್ಷಿಸಿ ಇಡಲ್ಪಟ್ಟು, ದಂಪತಿಗಳು ಒಪ್ಪಿದರೆ ಅದನ್ನು ವರ್ಗಾಯಿಸಲಾಗುವುದು ಎಂದು ಡಾ. ಸವಿತಾ ಹೇಳಿದರು.

ಕಾರ್ಯಕ್ರಮದಲ್ಲಿ ಸಂಸ್ಥೆಯ ನಿರ್ದೇಶಕ ಡಾ.ಜಿ.ಗುರುಪ್ರಸಾದ್, ಡಾ. ಮೃತ್ಯುಂಜಯ, ಡಾ.ಕೌಜಲಗಿ, ಡಾ.ಬಸಂತ್‌ಕುಮಾರ್, ಡಾ. ಸಚಿನ್ ಬಾತಿ, ವ್ಯವಸ್ಥಾಪಕ ಸಿದ್ದೇಶ್ವರ ಗುಬ್ಬಿ, ಮಂಜುನಾಥ್, ಅಂಜಲಿ ಮತ್ತಿತರರು ಉಪಸ್ಥಿತರಿದ್ದರು.



# ಕಲಾಕುಂಚದ ಅಧ್ಯಕ್ಷರಾಗಿ ಕೆ.ಎಚ್.ಮಂಜುನಾಥ್ ಪುನರಾಯ್ಕೆ



ದಾವಣಗೆರೆ, ಜೂ. 12 - ನಗರದ ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಸರ್ವ ಸದಸ್ಯರ ಮಹಾ ಸಭೆಯು ಕಲಾಕುಂಚ ಕಚೇರಿ ಸಭಾಂಗಣದಲ್ಲಿ ನಡೆಯಿತು. 2024-26ನೇ ಸಾಲಿನ ನೂತನ ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆಯಲ್ಲಿ ಸಂಸ್ಥೆಯ ಅಧ್ಯಕ್ಷರಾಗಿ ಕೆ.ಹೆಚ್. ಮಂಜುನಾಥ್ ಸರ್ವಾನುಮತದಿಂದ ಪುನರಾಯ್ಕೆಯಾಗಿದ್ದಾರೆ ಎಂದು ಕಲಾಕುಂಚ ಮಹಿಳಾ ವಿಭಾಗದ ಸಂಸ್ಥಾಪಕರಾದ ಶ್ರೀಮತಿ ಜ್ಯೋತಿ ಗಣೇಶ್ ಶೆಣೈ ತಿಳಿಸಿದ್ದಾರೆ.

ಗೌರವ ಅಧ್ಯಕ್ಷರಾಗಿ ನಲ್ಲೂರು ಲಕ್ಷ್ಮಣರಾವ್, ಉಪಾಧ್ಯಕ್ಷರಾಗಿ ಬಿ. ಕೃಷ್ಣಮೂರ್ತಿ, ಪ್ರಧಾನ ಕಾರ್ಯದರ್ಶಿಯಾಗಿ ಕೆ.ಸಿ. ಉಮೇಶ್, ಸಹ ಕಾರ್ಯದರ್ಶಿಯಾಗಿ ಡಿ.ಎಚ್. ಚನ್ನಬಸಪ್ಪ, ಸಂಚಾಲಕರಾಗಿ ವಿಜಯಕುಮಾರ್ ಶೆಟ್ಟಿ, ಸಹ ಸಂಚಾಲಕರಾಗಿ ಎಸ್. ಶಿವನಪ್ಪ, ಖಜಾಂಚಿಯಾಗಿ ನೀಲಾವರ ಭಾಸ್ಕರ ನಾಯಕ್, ಕಛೇರಿ ಕಾರ್ಯದರ್ಶಿಯಾಗಿ ಎಂ.ಎಸ್. ಪ್ರಸಾದ್, ಸಂಘಟನಾ ಕಾರ್ಯದರ್ಶಿಯಾಗಿ ಶ್ರೀಮತಿ ಶೈಲಾ ವಿಜಯ್‌ಕುಮಾರ್, ಸಮಿತಿ ಸದಸ್ಯರಾಗಿ ಶ್ರೀಮತಿ ಹೇಮಾ ಶಾಂತಪ್ಪ ಪೂಜಾರಿ, ಶ್ರೀಮತಿ ವಸಂತಿ ಮಂಜುನಾಥ್, ಶ್ರೀಮತಿ ಜ್ಯೋತಿ ಗಣೇಶ್‌ಶೆಣೈ , ಶ್ರೀಮತಿ ಲಲಿತ ಕಲ್ಲೇಶ್, ಶ್ರೀ ರಾಜಶೇಖರ ಬೆನ್ನೂರು, ಡಾ. ನಿರ್ಮಲಾ ವಿಶ್ವನಾಥ್ ಕುಲಕರ್ಣಿ ಅವಿರೋಧವಾಗಿ ಆಯ್ಕೆಯಾದರು.

ಕಲಾಕುಂಚ ಸಂಸ್ಥೆಯ ಸಂಸ್ಥಾಪಕ ಸಾಲಿಗ್ರಾಮ ಗಣೇಶ್ ಶೆಣೈ ಅಧ್ಯಕ್ಷತೆ ವಹಿಸಿದ್ದರು. ಶ್ರೀಮತಿ ಚಂದ್ರಶೇಖರ್ ಅಡಿಗ ಪ್ರಾರ್ಥಿಸಿದರು. ಡಿ.ಎಚ್. ಚನ್ನಬಸಪ್ಪ ಸ್ವಾಗತಿಸಿದರು. ಕಲಾಕುಂಚ ಮಹಿಳಾ ವಿಭಾಗದ ಅಧ್ಯಕ್ಷರಾದ ಶ್ರೀಮತಿ ಹೇಮಾ ಶಾಂತಪ್ಪ ಪೂಜಾರಿ ವಂದಿಸಿದರು.

# ನ್ಯಾಮತಿ ತಾ.ನಲ್ಲಿಂದು ವಿದ್ಯುತ್ ವ್ಯತ್ಯಯ

ನ್ಯಾಮತಿ ತಾಲ್ಲೂಕು ವ್ಯಾಪ್ತಿಯ ನ್ಯಾಮತಿ, ಸವಳಂಗ, ಚೀಲೂರು ಮತ್ತು ಕತ್ತಿಗೆ ವಿತರಣಾ ಕೇಂದ್ರಗಳಿಂದ ವಿದ್ಯುತ್ ಪೂರೈಕೆಯಾಗುವ ಎಲ್ಲಾ ಗ್ರಾಮಗಳಿಗೆ ಇಂದು ಬೆಳಿಗ್ಗೆ 10 ರಿಂದ ಸಂಜೆ 6ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# ಹೊನ್ನಾಳಿಯಲ್ಲಿ ಇಂದು ವಿದ್ಯುತ್ ವ್ಯತ್ಯಯ

ಹೊನ್ನಾಳಿ ಪಟ್ಟಣ ಮತ್ತು ಹಳ್ಳಿಗಳಿಗೆ ಇಂದು ಬೆಳಿಗ್ಗೆ 10 ರಿಂದ ಸಂಜೆ 6ರವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.


## ಸಾರ್ವಜನಿಕ ಪ್ರಕಟಣೆ

ಈ ಕೆಳಗೆ ಸಹಿ ಮಾಡಿರುವ ಶ್ರೀಮತಿ ಹಬೀಬುನ್ನೀಸಾ ಕೋಂ ಹೆಚ್. ಖಲೀಲ್ ಖಾನ್ ಆದ ನಾನು, ಈ ಕೆಳಕಂಡ ಷೆಡ್ಯೂಲ್‌ನಲ್ಲಿ ವಿವರಿಸಿರುವ ವಾಸದ ಮನೆಯನ್ನು ಅದರ ಹಕ್ಕುದಾರಿ ಸ್ವಾಧೀನಾನುಭವಿಗಳು ಮತ್ತು ಖಾತಾದಾರಿ ಮಾಲೀಕರಾದ ಶ್ರೀ ಹೆಚ್.ಎಂ. ಸಿದ್ದಯ್ಯ ಬಿನ್ ಲೇಟ್ ಹೆಚ್.ಎಂ. ಸಿದ್ದಲಿಂಗಯ್ಯ ಮತ್ತು ಇವರ ಕುಟುಂಬದ ಸದಸ್ಯರು, ಡೋರ್ 1058/1, 4ನೇ ಕ್ರಾಸ್, 2ನೇ ಮೇನ್, ವಿನೋಬ ನಗರ, ದಾವಣಗೆರೆ ಸಿಟಿ ವಾಸಿಯಾದ ಇವರಿಂದ ಖರೀದಿಸುತ್ತಿದ್ದು, ಷೆಡ್ಯೂಲ್ ಸೊತ್ತಿನ ಮೇಲೆ ಯಾರದಾದರೂ ಯಾವುದೇ ತರಹದ ಕಾನೂನು ರೀತ್ಯ ಹಕ್ಕು ವಗೈರೆ ಇದ್ದಲ್ಲಿ, ಅಂತಹವರುಈ ತಾರೀಖಿನಿಂದ 8 ದಿನಗಳ ಒಳಗಾಗಿ ಈ ಕೆಳಕಂಡ ವಿಳಾಸಕ್ಕೆ ಕಾನೂನು ರೀತ್ಯಾ ತಮ್ಮ ಹಕ್ಕು ಸ್ಥಾಪಿಸುವಂತಹ ಸೂಕ್ತ ದಾಖಲೆಗಳೊಂದಿಗೆ ಲಿಖಿತವಾಗಿ ತಿಳಿಸುವುದು. ಇಲ್ಲವಾದಲ್ಲಿ ಷೆಡ್ಯೂಲ್ ಸೊತ್ತಿನ ಮೇಲೆ ಕಾನೂನು ರೀತ್ಯಾ ಯಾರದ್ದೂ ಎಂದಿಗೂ ಯಾವುದೇ ತರಹದ ಹಕ್ಕು ವಗೈರೆ ಇಲ್ಲವೆಂದು ಪರಿಗಣಿಸಿ, ನಾನು ಷೆಡ್ಯೂಲ್ ಸೊತ್ತಿನ ಹಕ್ಕಿನ ಬಗ್ಗೆ ಯಾವುದೇ ತಂಟೆ-ತಕರಾರು ಮಾಡಲು, ಯಾವುದೇ ತರಹದ ಹಕ್ಕು ಸ್ಥಾಪಿಸಲು ಯಾವುದೇ ವ್ಯಕ್ತಿಯೂ ಯಾವುದೇ ತರಹದ ಹಕ್ಕನ್ನೂ ಪಡೆಯಲಾರರು ಮತ್ತು ತಮ್ಮ ಹಕ್ಕು ಕಳೆದುಕೊಂಡಿರುತ್ತಾರೆಂದೂ ಮತ್ತು ಸದರಿ ನನ್ನನ್ನು ಕಾನೂನು ರೀತ್ಯಾ ಯಾವುದೇ ರೀತಿಯಲ್ಲಿ ಜವಾಬ್ದಾರರನ್ನಾಗಲೀ ಹೊಣೆಗಾರರನ್ನಾಗಲೀ ಮಾಡಲು ಸಾಧ್ಯವಿರುವುದಿಲ್ಲವೆಂದು ಈ ರೀತಿ ತಿಳಿಸುವ ಸಾರ್ವಜನಿಕ ಪ್ರಕಟಣೆ ನೀಡುತ್ತಿದ್ದೇನೆ, ಎಲ್ಲರೂ ತಿಳಿಯಿರಿ.

ಷೆಡ್ಯೂಲ್ : ದಾವಣಗೆರೆ ಸಿಟಿ, ವಿನೋಬ ನಗರ, 2ನೇ ಮೇನ್, 11ನೇ ಕ್ರಾಸ್‌ನಲ್ಲಿ ಬರತಕ್ಕ ಸೈಟ್ ನಂ. 532, ಚಾಲ್ತಿ ಡೋರ್ ನಂ. 1387/1, 2. ಸ್ವತ್ತಿನ ಸಂಖ್ಯೆ 29.1.518-678/0-01, ಅಳತೆ : ಪೂರ್ವ, ಪಶ್ಚಿಮ : 10.363221 ಮೀಟರ್, ಉತ್ತರ-ದಕ್ಷಿಣ : 6.096012 ಮೀಟರ್-63,174320 ಚದುರ ಮೀಟರ್ ಇದ್ದು, ಅಡಿಗಳಲ್ಲಿ ಅಳತೆ : 34x20 ಅಡಿ ವುಳ್ಳ ಜಾಗದಲ್ಲಿರುವ ವಾಸದ ಮನೆ ಮತ್ತು ಜಾಗ ಸಹಿತ ಪೂರಾ ಸೊತ್ತಿಗೆ ಚಕ್ಕುಬಂದಿ-ಪೂರ್ವಕ್ಕೆ : ವಸಂತ ರೆಡ್ಡಿ ಇವರ ಮನೆ, ಪಶ್ಚಿಮಕ್ಕೆ : ಬುಡೇನ್ ಸಾಬ್ ಇವರ ಮನೆ, ಉತ್ತರಕ್ಕೆ : ಕನ್ಸರ್‌ವೆನ್ಸಿ, ದಕ್ಷಿಣಕ್ಕೆ : 30 ಅಡಿ ಅಗಲದ ರಸ್ತೆ.

**ಶ್ರೀಮತಿ ಹಬೀಬುನ್ನಿಸಾ ಕೋಂ ಹೆಚ್. ಖಲೀಲ್ ಖಾನ್**
**# 326, 4ನೇ ಕ್ರಾಸ್, ನೀರಿನ ಟ್ಯಾಂಕ್ ಹತ್ತಿರ, ನರಸರಾಜ ಪೇಟೆ, ದಾವಣಗೆರೆ ಸಿಟಿ, 9844161543**
**ದಿನಾಂಕ : 11.5.2024**

ಇಂತಿ ತಮ್ಮ ವಿಶ್ವಾಸಿಗಳು
ಸಹಿ/- ಮಾಲೀಕರು

## ಸಾರ್ವಜನಿಕ ಪ್ರಕಟಣೆ

1) ದಾವಣಗೆರೆ ವಾಸಿ ಶ್ರೀಮತಿ ಗೀತಾ ಗೌಡ ತಂದೆ ಲೇಟ್ ದೊಗ್ಗಳ್ಳಿ ಪರಮೇಶ್ವರಪ್ಪ, ವಯಸ್ಸು ಸುಮಾರು 66 ವರ್ಷ. 2) ಹುಬ್ಬಳ್ಳಿ ವಾಸಿ ರೀಟಾ ದೊಗ್ಗಳ್ಳಿ ತಂದೆ ಲೇಟ್ ದೊಗ್ಗಳ್ಳಿ ಪರಮೇಶ್ವರಪ್ಪ, ವಯಸ್ಸು ಸುಮಾರು 64 ವರ್ಷ. 3) ದಾವಣಗೆರೆ ವಾಸಿ ಲತಾ ದೊಗ್ಗಳ್ಳಿ ತಂದೆ ಲೇಟ್ ದೊಗ್ಗಳ್ಳಿ ಪರಮೇಶ್ವರಪ್ಪ, ವಯಸ್ಸು ಸುಮಾರು 62 ವರ್ಷ.

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ನಮ್ಮ ಎಲ್ಲಾ ಆಸ್ತಿಯು ಒಟ್ಟು ಕುಟುಂಬದ ಎಲ್ಲಾ ಆಸ್ತಿಗಳ ಬಗ್ಗೆ ದಾವಣಗೆರೆ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಕೇಸ್ ದಾಖಲಾಗಿದ್ದು, ಎಫ್.ಡಿ.ಪಿ-21/2015 ರಲ್ಲಿ 1/5ನೇ ಭಾಗವಾಗಿ ವಿಂಗಡಿಸಿದ್ದು, ನಾವು ಸದರಿ ಆದೇಶದ ವಿರುದ್ಧ ಅಧೀನ 2ನೇ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ ದಾವಣಗೆರೆ ಆರ್.ಎ. ಕೇಸ್ ನಂ. 30/2022ರಲ್ಲಿ ಅಪೀಲು ಸಲ್ಲಿಸಿದ್ದು, ಸದರಿ ಅಪೀಲಿನಲ್ಲಿ ತಡೆಯಾಜ್ಞೆಯನ್ನು ನೀಡಿರುತ್ತಾರೆ. ಮೇಲ್ಕಂಡ ನಾಗನೂರು ಗ್ರಾಮದ ರೀ. ಸರ್ವೆ ನಂ. 136/3, ವಿಸ್ತೀರ್ಣ : 7-ಎಕರೆ, 22ಗುಂಟೆ ಇದ್ದು, ಕೆಲವರು ಸಂಬಂಧವಿಲ್ಲದ ವ್ಯಕ್ತಿಗಳು ನಮ್ಮ ಕುಟುಂಬದ ಸಂಬಂಧಿಕರು ಎಂದು ಹೇಳಿಕೊಂಡು ಜನಗಳಿಗೆ ಮೋಸ ಮಾಡಲು ಮುಂಗಡವಾಗಿ ಹಣವನ್ನು ತೆಗೆದುಕೊಳ್ಳಲು ಪ್ರಯತ್ನಿಸಿರುತ್ತಾರೆ ಎಂಬ ವಿಷಯ ನಮಗೆ ಗೊತ್ತಾಗಿದ್ದು, ಸಾರ್ವಜನಿಕರಿಗೆ ಯಾವುದೇ ರೀತಿಯ ಅನಾಮಧೇಯ ವ್ಯಕ್ತಿಗಳ ಮಾತುಗಳನ್ನು ನಂಬಿ ಕರಾರು ಪತ್ರ ಮಾಡಿಸಿಕೊಂಡಲ್ಲಿ ಮತ್ತು ಅನಾಮಧೇಯ ವ್ಯಕ್ತಿಗಳ ಮಾತುಗಳನ್ನು ಕೇಳಿ ಯಾವುದೇ ಹಣ ಮತ್ತು ಸ್ಥಿರ ಸೊತ್ತಿನ ವ್ಯವಹಾರವನ್ನು ಮಾಡಿಕೊಂಡಲ್ಲಿ ಸದರಿ ವ್ಯವಹಾರಕ್ಕೆ ಜಮೀನಿನ ಮಾಲೀಕರಿಗೆ ಯಾವುದೇ ರೀತಿಯ ಸಂಬಂಧವಿರುವುದಿಲ್ಲ, ಸದರಿ ಈ ಆಸ್ತಿಯು ಮಾರಾಟಕ್ಕೆ ಇರುವುದಿಲ್ಲ. ಈ ಆಸ್ತಿಯ ಬಗ್ಗೆ ಯಾವುದೇ ತರಹದ ವ್ಯವಹಾರವನ್ನು ಮಾಡಬೇಡಿ ಎಂದು ಜನಗಳಿಗೆ ಮತ್ತೊಮ್ಮೆ ನಾವುಗಳು ಗಮನಕ್ಕೆ ತರುತ್ತಿದ್ದೇವೆ.

ವಂದನೆಗಳೊಂದಿಗೆ,

**ದಿನಾಂಕ : 13.6.2024,**
**ಸ್ಥಳ : ದಾವಣಗೆರೆ.**
**ವಕೀಲರು : ಸಹಿ/- ಎಂ.ಆರ್. ಮಹಾಬಲೇಶ್**
**ಬಿ.ಕಾಂ., ಎಲ್‌ಎಲ್‌ಬಿ., ವಕೀಲರು,**
**ಷಡಕಪ್ಪ ಕಾಂಪೌಂಡ್, ಪಂಜಾಬ್ ನ್ಯಾಷನಲ್ ಬ್ಯಾಂಕ್ ಹಿಂಭಾಗ,**
**ಹಳೇ ಪಿ.ಬಿ. ರಸ್ತೆ, ದಾವಣಗೆರೆ-2. ಫೋ. : 9886003466**

ಇಂತಿ ತಮ್ಮ ವಿಶ್ವಾಸಿಗಳು
ಸಹಿ/- ಜಮೀನಿನ ಮಾಲೀಕರು

## ಸಾರ್ವಜನಿಕ ಪ್ರಕಟಣೆ

ದಾವಣಗೆರೆ ವಾಸಿ ಶ್ರೀ ದೊಗ್ಗಳ್ಳಿ ದಯಾನಂದ ಬಿನ್ ಲೇಟ್ ದೊಗ್ಗಳ್ಳಿ ಪರಮೇಶ್ವರಪ್ಪ, ವಯಸ್ಸು ಸುಮಾರು 61 ವರ್ಷ ವಾಸ : ಡೋರ್ ನಂ. 212/2, ನರಸರಾಜ ರಸ್ತೆ, ದಾವಣಗೆರೆ, ಜಮೀನಿನ ಮಾಲೀಕರು ಆದ ನಾನು ಮೊ. 8217714090.

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ, ಗ್ರಾಮ ನಾಗನೂರು, ಸರ್ವೆ ನಂ. 136/3, ವಿಸ್ತೀರ್ಣ : ಎಕರೆ-7, ಗುಂಟೆ-22, ವುಳ್ಳ ಜಮೀನಿನ ಬಗ್ಗೆ ಈ ಪತ್ರಿಕೆಯಲ್ಲಿ ನಾಲ್ಕು ಬಾರಿ ಪ್ರಕಟಣೆ ಮೂಲಕ ಎಲ್ಲಾ ವಿಷಯವನ್ನು ಮಹಾಜನತೆಗೆ ತಿಳಿಸಿರುತ್ತೇನೆ. ಈ ಜಮೀನನ್ನು ಹಿರಿಯ ನೋಂದಣಾಧಿಕಾರಿ ಕಛೇರಿಯಲ್ಲಿ ಯಾರಿಗೂ ನೋಂದಣಿ ಆಗಿರುವುದಿಲ್ಲ. ಯಾವುದೇ ತರಹದ ಸೈಟಿನ ಅಭಿವೃದ್ಧಿ ಕಾರ್ಯ ಮಾಡದೇ ಈ ವ್ಯಕ್ತಿಯು ಶ್ರೀ ಸಂತೋಷ್‌ಕುಮಾರ್ ಟಿ.ಸಿ. ಬಿನ್ ಲೇಟ್ ಚಿತ್ರ ಲಿಂಗರಾಜು, ವಯಸ್ಸು 42, ವಾಸ : ಕೊಟ್ಟೂರು ಟೌನ್, ಕೊಟ್ಟೂರು ತಾಲ್ಲೂಕು, ಬಳ್ಳಾರಿ ಜಿಲ್ಲೆ, ಈ ವ್ಯಕ್ತಿಯು ಮಧ್ಯವರ್ತಿಗಳ ದಲ್ಲಾಲಿ ಆಸೆಗೆ ಸೈಟಿನ ಕಚ್ಚಾ ನಕಾಶೆಯನ್ನು ಮಾಡಿಸಿ, ಜನಗಳಿಂದ ಮುಂಗಡ ಹಣವನ್ನು ತೆಗೆದುಕೊಂಡಿರುವ ವಿಚಾರ ನಮ್ಮಗಳ ಗಮನಕ್ಕೆ ಬಂದಿರುತ್ತದೆ. ಈ ವ್ಯಕ್ತಿಯು ಜನಗಳಿಗೆ ಮೋಸ ಮಾಡಲು ಈ ತರಹದ ಹಣವನ್ನು ವಸೂಲಿ ಮಾಡುತ್ತಿದ್ದು ಜಮೀನಿನ ಮಾಲೀಕರಿಗೆ ಯಾವುದೇ ರೀತಿಯ ಸಂಬಂಧ ಇರುವುದಿಲ್ಲ. ಸದರಿ ಯಾವುದೋ ಹಲವು ವರ್ಷಗಳ ಹಿಂದಿನ ಇ ಸ್ಟಾಂಪ್, 4 ವರ್ಷ, 48 ತಿಂಗಳ ಪತ್ರವನ್ನು ತೋರಿಸಿ ಮೋಸ ಮಾಡುವ ವಿಚಾರ ಈ ಆಸ್ತಿಯು ದಾವಣಗೆರೆ ಸಿವಿಲ್ ನ್ಯಾಯಾಲಯಕ್ಕೆ ಹಲವಾರು ಕೇಸ್ ದಾಖಲಾಗಿದ್ದು, ಸದರಿ ಈ ಆಸ್ತಿಯು ಮಾರಾಟಕ್ಕೆ ಇರುವುದಿಲ್ಲ. ಈ ವ್ಯಕ್ತಿಯ ಮೂಲಕ ಈ ಆಸ್ತಿಯ ಬಗ್ಗೆ ಯಾವುದೇ ತರಹದ ವ್ಯವಹಾರವನ್ನು ಮಾಡಬೇಡಿ ಎಂದು ಜನಗಳಿಗೆ ಮತ್ತೊಮ್ಮೆ ನಾವುಗಳು ಗಮನಕ್ಕೆ ತರುತ್ತಿದ್ದೇವೆ. ವಂದನೆಗಳೊಂದಿಗೆ.

**ದಿನಾಂಕ : 13.6.2024, ಸ್ಥಳ : ದಾವಣಗೆರೆ.**
**ವಕೀಲರು : ಸಹಿ/- ವಿ. ತಿಮ್ಮೇಶ್**
**ಬಿ.ಕಾಂ., ಎಲ್‌ಎಲ್‌ಬಿ., ವಕೀಲರು,**
**#866/4, 1ನೇ ಮಹಡಿ, ಕಾಂಪ್ಲೆಕ್ಸ್ ನಂ.1.**
**ಎಲ್.ಕೆ. ಹನುಮಂತಪ್ಪ ಕಾಂಪ್ಲೆಕ್ಸ್, ದಾವಣಗೆರೆ.**

ಇಂತಿ ತಮ್ಮ ವಿಶ್ವಾಸಿಗಳು
ಸಹಿ/- ಜಮೀನಿನ ಮಾಲೀಕರು

## ಸಾರ್ವಜನಿಕ ಪ್ರಕಟಣೆ

ದಾವಣಗೆರೆ ವಾಸಿ ಶ್ರೀ ದೊಗ್ಗಳ್ಳಿ ದಯಾನಂದ ಬಿನ್ ಲೇಟ್ ದೊಗ್ಗಳ್ಳಿ ಪರಮೇಶ್ವರಪ್ಪ, ವಯಸ್ಸು ಸುಮಾರು 60 ವರ್ಷ ವಾಸ : ಡೋರ್ ನಂ. 212/2, ನರಸರಾಜ ರಸ್ತೆ, ದಾವಣಗೆರೆ, ಜಮೀನಿನ ಮಾಲೀಕರು ಆದ ನಾನು ಮೊ. 8217714090.

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ, ನಮ್ಮ ಎಲ್ಲಾ ಆಸ್ತಿಯು ಒಟ್ಟು ಕುಟುಂಬದ ಆಸ್ತಿಗಳ ಬಗ್ಗೆ ದಾವಣಗೆರೆ ಸಿವಿಲ್ ನ್ಯಾಯಾಲಯದಲ್ಲಿ ಹಲವಾರು ಕೇಸ್ ದಾಖಲಾಗಿದ್ದು, ನಾಗನೂರು ಗ್ರಾಮದ ರೀ. ಸರ್ವೆ ನಂ. 136/3, ವಿಸ್ತೀರ್ಣ : ಎಕರೆ-7, ಗುಂಟೆ-22, ಭಾಗ-1 ಮತ್ತು ಭಾಗ-2 ಇದ್ದು. 6ನೇ ಮುಖ್ಯರಸ್ತೆ ಶಿವ-ಪಾರ್ವತಿ ಬದಾವಣೆಯ, ಒಳಗಡೆ ಇರುವ ಪಕ್ಕದ ಜಮೀನು ನಾಗನೂರು ಮುಖ್ಯರಸ್ತೆ. ಕೆಲವರು ಸಂಬಂಧವಿಲ್ಲದ ವ್ಯಕ್ತಿಗಳ ನಮ್ಮ ಸಂಬಂಧಿಕರು ಎಂದು ಹೇಳಿಕೊಂಡು ಜನಗಳಿಗೆ ಮೋಸ ಮಾಡಲು ಮುಂಗಡವಾಗಿ ಹಣವನ್ನು ತೆಗೆದುಕೊಳ್ಳಲು ಪ್ರಯತ್ನಿಸಿರುತ್ತಾರೆ ಎಂಬ ವಿಷಯ ನಮಗೆ ಗೊತ್ತಾಗಿದ್ದು, ಸಾರ್ವಜನಿಕರು ಯಾವುದೇ ರೀತಿಯ ಅನಾಮಧೇಯ ವ್ಯಕ್ತಿಗಳ ಸುಳ್ಳು ಮಾತುಗಳನ್ನು ನಂಬಿ ಕರಾರು ಪತ್ರ, ವರ್ಗಾವಣೆ, ಜಿಪಿಎ ಮಾಡಿಸಿಕೊಂಡಲ್ಲಿ ಮತ್ತು ಸಂಬಂಧವಿಲ್ಲದ, ಅಧಿಕಾರವಿಲ್ಲದ ವ್ಯಕ್ತಿಗಳ ಮಾತುಗಳನ್ನು ಕೇಳಿ ಯಾವುದೇ ಹಣ ಮತ್ತು ಸ್ಥಿರ ಸೊತ್ತಿನ ವ್ಯವಹಾರವನ್ನು ಮಾಡಿಕೊಂಡಲ್ಲಿ, ಸದರಿ ವ್ಯವಹಾರಕ್ಕೆ ಜಮೀನಿನ ಮಾಲೀಕರಿಗೆ ಯಾವುದೇ ರೀತಿಯ ಸಂಬಂಧವಿರುವುದಿಲ್ಲ. ಸದರಿ ಜಮೀನಿಗೆ ಸಂಬಂಧಪಟ್ಟಂತೆ ಯಾವುದೇ ರೀತಿಯ ವ್ಯವಹಾರಗಳು ನಡೆದ ಬಗ್ಗೆ ನಮ್ಮ ಗಮನಕ್ಕೆ ಬಂದರೆ, ಅಂತಹ ವ್ಯಕ್ತಿಗಳನ್ನು ದಾವೆಯಲ್ಲಿ ಕಕ್ಷಿಗಾರರನ್ನಾಗಿ ಸೇರಿಸಲಾಗುವುದು ಎಂದು ಸದರಿ ಈ ಆಸ್ತಿಯು ಮಾರಾಟಕ್ಕೆ ಇರುವುದಿಲ್ಲ. ಈ ಆಸ್ತಿಯ ಬಗ್ಗೆ ಯಾವುದೇ ತರಹದ ವ್ಯವಹಾರವನ್ನು ಮಾಡಬೇಡಿ ಎಂದು ಜನಗಳಿಗೆ ಮತ್ತೊಮ್ಮೆ ನಾವುಗಳು ಗಮನಕ್ಕೆ ತರುತ್ತಿದ್ದೇವೆ. ವಂದನೆಗಳೊಂದಿಗೆ,

**ದಿನಾಂಕ :13.6.2024, ಸ್ಥಳ : ದಾವಣಗೆರೆ.**
**ವಕೀಲರು : ಸಹಿ/- ತಿಪ್ಪೇಶ್ ನಾಯ್ಕ (ರಾಥೋಡ್)**
**ಬಿ.ಕಾಂ., ಎಲ್‌ಎಲ್‌ಬಿ., ವಕೀಲರು,**
**#485/1, 1ನೇ ಮೇನ್, 4ನೇ ಕ್ರಾಸ್,**
**ಕೆ.ಬಿ. ಬಡಾವಣೆ, ದಾವಣಗೆರೆ-2.**

ಇಂತಿ ತಮ್ಮ ವಿಶ್ವಾಸಿಗಳು
ಸಹಿ/- ಜಮೀನಿನ ಮಾಲೀಕರು

# ಹಣಬಲ, ತೋಳ್ಬಲ, ಸುಳ್ಳು ಸುದ್ದಿಗಳಿಂದ ನನಗೆ ಕಡಿಮೆ ಮತ : ವಿನಯ್‌ಕುಮಾರ್

ದಾವಣಗೆರೆ, ಜೂ.12- ದಾವಣಗೆರೆ ಲೋಕಸಭಾ ಕ್ಷೇತ್ರದ ಚುನಾವಣೆಯಲ್ಲಿ ಎರಡೂ ಪಕ್ಷಗಳು ಹಣದ ಹೊಳೆ ಹರಿಸಿ ಮತಗಳನ್ನು ಖರೀದಿಸಿವೆ ಎಂದು ಆರೋಪಿಸಿರುವ ಲೋಕಸಭೆ ಚುನಾವಣೆಯ ಪರಾಜಿತ ಅಭ್ಯರ್ಥಿ ಬಿ.ಜಿ. ವಿನಯ್ ಕುಮಾರ್, ಹಣಬಲ, ತೋಳ್ಬಲ ಹಾಗೂ ಸುಳ್ಳು ಸುದ್ದಿಗಳನ್ನು ಹರಡಿದ ಪರಿಣಾಮ ನನಗೆ ಕಡಿಮೆ ಮತಗಳು ಬಂದಿವೆ ಎಂದು ಹೇಳಿದರು.



ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು ದಾವಣಗೆರೆಗೆ ಬರುವುದಕ್ಕೂ ಮೊದಲು 3 ರಿಂದ4 ಲಕ್ಷ ಮತಗಳು ಸಿಗುವ ನಿರೀಕ್ಷೆ ಇತ್ತು. ಆದರೆ ಅವರು ಬಂದು ವಿನಯ್ ಕುಮಾರ್‌ಗೆ ಮತ ಹಾಕಿದರೆ ಬಿಜೆಪಿಗೆ ಮತ ಹಾಕಿದಂತೆ, ಕಾಂಗ್ರೆಸ್‌ಗೆ ಮತ ಹಾಕಿದರೆ ನನ್ನನ್ನು ಬೆಂಬಲಿಸಿದಂತೆ ಎಂದು ಹೇಳಿಕೆ ಕೊಟ್ಟಿದ್ದರು. ಇದರಿಂದ ನನಗೆ ಬಲವಾದ ಪೆಟ್ಟು ಬಿತ್ತು. ನನ್ನ ಜೊತೆ ಗುರುತಿಸಿಕೊಂಡವರು ದೂರವಾದರು.

ಪ್ರಜಾ ಪ್ರಭುತ್ವದ ಉಳಿವಿಗಾಗಿ, ಪಾಳೇಗಾರಿಕೆ ವಿರುದ್ಧ ಹೋರಾಟದ ದನಿಯನ್ನು ಜನಾಂದೋಲನದ ರೀತಿ ಪರಿವರ್ತನೆ ಮಾಡುವ ಸಲುವಾಗಿ, ಸಮಾಜದ ಗುರುಗಳು ಹಾಗೂ ಮುಖ್ಯಮಂತ್ರಿಗಳನ್ನು ಎದುರು ಹಾಕಿಕೊಂಡು ಪ್ರಚಾರ ನಡೆಸಿದ್ದೆ. ಜನರೂ ಸಹ ನನ್ನನ್ನು ಬೆಂಬಲಿಸುವುದಾಗಿ ಆಶ್ವಾಸನೆ ನೀಡಿದ್ದರು. ನನಗೆ ಪ್ರಜಾ ಪ್ರಭುತ್ವದಲ್ಲಿ ನಂಬಿಕೆ ಇತ್ತು. ಕನಿಷ್ಟ ಪಕ್ಷ ಒಂದೂವರೆ ಲಕ್ಷ ಮತ ಪಡೆಯುವ ನಿರೀಕ್ಷೆ ಇತ್ತು ಎಂದು ಹೇಳಿದರು.

ಚುನಾವಣಾ ಹಿಂದಿನ 'ಕತ್ತಲ ರಾತ್ರಿ'ಯನ್ನು ರಾಜಕೀಯ ಪಕ್ಷಗಳು, ಪದ್ಧತಿಯನ್ನಾಗಿ ಮಾಡಿಕೊಂಡು ಬಂದಿವೆ. ಹಣ ಹಂಚಿದವರು ಹೆಚ್ಚು ಮತ ಪಡೆದಿದ್ದಾರೆ. ನಾನು ಹಣ ಹಂಚದೆಯೇ 42907ಮತ ಪಡೆದಿದ್ದೇನೆ ಎಂದರು.

ವಿನಯ್ ಕುಮಾರ್ ಹೊಂದಾಣಿಕೆ ಮಾಡಿಕೊಂಡಿದ್ದಾರೆ, ಸೋಲುತ್ತಾರೆ ಎಂದೆಲ್ಲಾ ಸುಳ್ಳು ಸುದ್ದಿ ಹರಡಲಾಯಿತು. ನನ್ನ ಜೊತೆ ಇದ್ದವರನ್ನು ಬೆದರಿಸಿ, ಹಣದ ಆಮಿಷ ತೋರಿಸಿ ದೂರ ಮಾಡಲಾಯಿತು.

ಕಾಂಗ್ರೆಸ್ ಅಭ್ಯರ್ಥಿಯ 26 ಸಾವಿರ ಮತಗಳ ಅಂತರದ ಗೆಲುವು ಗೆಲುವೇ ಅಲ್ಲ. ಇದು ಪ್ರಜಾ ಪ್ರಭುತ್ವದ ಕಗ್ಗೊಲೆ. ಎಸ್.ಎಸ್ ಮಲ್ಲಿಕಾರ್ಜುನ್ ಅವರ ಕ್ಷೇತ್ರದಲ್ಲಿಯೇ 25 ಸಾವಿರ ಮತಗಳ ಹಿನ್ನಡೆ ಇದೆ. ಅಲ್ಲಿಯೇ ಅವರನ್ನು ಜನರು ತಿರಸ್ಕರಿಸಿದ್ದಾರೆ. ಕಕ್ಕರಗೊಳ್ಳದಲ್ಲೂ ಜನ ತಿರಸ್ಕರಿಸಿದ್ದಾರೆ ಎಂದರು

ನನಗೆ ತಾತ್ಕಾಲಿಕ ಹಿನ್ನಡೆಯಾಗಿದೆ. ಆದರೆ ನಾನು ಹಠವಾದಿ, ದಾವಣಗೆರೆ ರಾಜಕಾರಣದಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುತ್ತೇನೆ. ಐಎಎಸ್, ಕೆಎಎಸ್ ತರಬೇತಿ ನೀಡುವುದು, ಸರ್ಕಾರಿ ಶಾಲಾ ಮಕ್ಕಳಿಗೆ ಉಚಿತ ನವೋದಯ ತರಬೇತಿ ನೀಡುವುದು ಸೇರಿದಂತೆ ರಚನಾತ್ಮಕ ಚಟುವಟಿಕೆಗಳನ್ನು ಹಮ್ಮಿಕೊಳ್ಳುತ್ತೇನೆ. ಜನರ ಮನದಲ್ಲಿ ಉಳಿಯುವಂತಹ ಕಾರ್ಯಗಳನ್ನು ಮಾಡುತ್ತೇನೆ ಎಂದರು.

ಎರಡು ವರ್ಷ ಯಾವ ಪಕ್ಷದಲ್ಲೂ ಗುರುತಿಸಿಕೊಳ್ಳದೆ ಕೆಲಸ ಮಾಡುತ್ತೇನೆ. ದಾವಣಗೆರೆ ಉತ್ತರ, ದಕ್ಷಿಣ, ಹರಿಹರ ಅಥವಾ ಹೊನ್ನಾಳಿ ಕ್ಷೇತ್ರಗಳಲ್ಲಿ ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸುವ ಇಂಗಿತವಿದೆ ಎಂದು ವಿನಯ್ ಹೇಳಿದರು.

ರಂಗಸ್ವಾಮಿ, ಅಯ್ಯಣ್ಣ ಈ ಸಂದರ್ಭದಲ್ಲಿದ್ದರು.

# ಕನ್ನಡ ನಾಡು ನುಡಿಯ ಪರವಾಗಿ ನಿಲ್ಲುವೆ : ಪ್ರಭಾ

ದಾವಣಗೆರೆ, ಜೂ. 12 - ಕನ್ನಡ ನಾಡು ನುಡಿಯ ಪರವಾಗಿ ಸದಾ ನಿಲ್ಲುವೆ ಎಂದು ನೂತನ ಸಂಸದರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ಹೇಳಿದರು.



ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ತಮ್ಮ ಗೃಹ ಕಚೇರಿಯಲ್ಲಿ ನೀಡಿದ ಅಭಿನಂದನೆಯನ್ನು ಸ್ವೀಕರಿಸಿ ಅವರು ಮಾತನಾಡಿದರು.

ನನೆಗುದಿಗೆ ಬಿದ್ದಿರುವ ವಿಶ್ವ ಕನ್ನಡ ಸಮ್ಮೇಳನವನ್ನು ದಾವಣಗೆರೆಯಲ್ಲಿಯೇ ಅತೀ ಶೀಘ್ರವಾಗಿ ನಡೆಸಲು ಪ್ರಯತ್ನಿಸುವುದಾಗಿ ಸಂಸದರು ಜಿಲ್ಲಾ ಕಸಾಪ ಬಳಗಕ್ಕೆ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್‌ನ ಅಧ್ಯಕ್ಷ ಬಿ. ವಾಮದೇವಪ್ಪ, ದಾವಣಗೆರೆ ಲೋಕಸಭಾ ಕ್ಷೇತ್ರದ ಪ್ರಥಮ ಮಹಿಳಾ ಸಂಸದೆ ಎನ್ನುವ ಹೆಗ್ಗಳಿಕೆಯನ್ನು ಹೊಂದಿರುವ ತಾವು, ಲೋಕಸಭೆಯಲ್ಲಿ ಕನ್ನಡದಲ್ಲೇ ಪ್ರಮಾಣ ವಚನ ಸ್ವೀಕರಿಸುವಂತೆ ಸಲಹೆ ನೀಡಿದರು. ಈ ಹಿಂದೆ ದಿ. ಜೆ. ಹೆಚ್. ಪಟೇಲರು ಕೂಡಾ ಕನ್ನಡದಲ್ಲೇ ಪ್ರಮಾಣ ವಚನ ಸ್ವೀಕರಿಸಿದ್ದರು ಎಂದು ವಾಮದೇವಪ್ಪ ಸ್ಮರಿಸಿದರು.

ದಾವಣಗೆರೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಕೂಡ ಈ ಸಂದರ್ಭದಲ್ಲಿ ಪರಿಷತ್ ಅಧ್ಯಕ್ಷರಾದ ಶ್ರೀಮತಿ ಸುಮತಿ ಜಯಪ್ಪ ಅವರು ಸಂಸದರನ್ನು ಅಭಿನಂದಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಕಸಾಪ ಗೌರವ ಕಾರ್ಯದರ್ಶಿ ರೇವಣಸಿದ್ದಪ್ಪ ಅಂಗಡಿ, ಗೌರವ ಕೋಶಾಧ್ಯಕ್ಷ, ಕೆ. ರಾಘವೇಂದ್ರ ನಾಯರಿ, ಸಂಘಟನಾ ಕಾರ್ಯದರ್ಶಿ ಜಗದೀಶ್, ಜಿಗಳಿ ಪ್ರಕಾಶ್, ಪದಾಧಿಕಾರಿಗಳಾದ ಎನ್.ಎಸ್. ರಾಜು, ಜ್ಯೋತಿ ಉಪಾಧ್ಯಾಯ, ಎಸ್.ಎಂ. ಮಲ್ಲಮ್ಮ, ರುದ್ರಾಕ್ಷಿ ಬಾಯಿ, ನಾಗರಾಜ್ ಸಿರಿಗೆರೆ, ದಾಗಿನಕಟ್ಟೆ ಪರಮೇಶ್ವರಪ್ಪ, ಬೇತೂರು ಎಂ.ಷಡಾಕ್ಷರಪ್ಪ, ಆರ್. ಶಿವಕುಮಾರ್, ಪಂಕಜ, ಕುರ್ಕಿ ಸಿದ್ದೇಶ್, ಬಕ್ಕೇಶ್ ಮತ್ತು ಜಿಲ್ಲಾ ಸರ್ಕಾರಿ ನೌಕರರ ಸಂಘದ ಮಾಜಿ ಅಧ್ಯಕ್ಷ ಕೆ. ಶಿವಶಂಕರ್ ಮತ್ತಿತರರು ಉಪಸ್ಥಿತರಿದ್ದರು.

# ಎಸ್ಸೆಸ್ ಹುಟ್ಟುಹಬ್ಬ: ಅಭಿಮಾನಿ ಬಳಗದಿಂದ ಸಾಮಾಜಿಕ ಕಾರ್ಯಕ್ರಮಗಳು



ದಾವಣಗೆರೆ, ಜೂ.12- ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಶಾಸಕ ಡಾ. ಶಾಮನೂರು ಶಿವಶಂಕರಪ್ಪಅವರುಇದೇ ದಿನಾಂಕ 16ಕ್ಕೆ 93ನೇ ವರ್ಷ ಪೂರೈಸಿ 94ನೇ ವಸಂತಕ್ಕೆ ಕಾಲಿಡುತ್ತಿರುವ ಹಿನ್ನೆಲೆಯಲ್ಲಿ ಅಭಿಮಾನಿ ಬಳಗದಿಂದ ವಿವಿಧ ಸಾಮಾಜಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ತಿಳಿಸಿದ್ದಾರೆ.

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಾಳೆ ದಿನಾಂಕ 13ರ ಗುರುವಾರ ಬೆಳಿಗ್ಗೆ 11 ಗಂಟೆಗೆ ಆವರಗೆರೆಯ ಗೋಶಾಲೆಯಲ್ಲಿರುವ ಗೋವುಗಳಿಗೆ ಮೇವು ವಿತರಿಸಲಾಗುವುದು ಎಂದರು.

ದಿನಾಂಕ 14ರ ಶುಕ್ರವಾರ ಬೆಳಿಗ್ಗೆ 11ಕ್ಕೆ ವನಿತಾ ಸಮಾಜದ ಹಿರಿಯ ವನಿತೆಯರಿಗೆ ಸೀರೆ ವಿತರಣೆ ಹಾಗೂ ಸಿಹಿ ಊಟದ ವ್ಯವಸ್ಥೆ ಮಾಡಲಾಗಿದೆ. ದಿನಾಂಕ 15ರ ಶನಿವಾರ ಬೆಳಿಗ್ಗೆ 11ಕ್ಕೆ ಅಂಗವಿಕಲರ ವಸತಿ ಶಾಲೆ ಮಕ್ಕಳಿಗೆ ಸಿಹಿ ವಿತರಣೆ ಮಾಡಲಾಗುವುದು ಎಂದು ಮಾಹಿತಿ ನೀಡಿದರು.

ಈಗಾಗಲೇ ಕ್ರೀಡಾಪಟುಗಳ ಸಂಘದಿಂದ ಎಸ್.ಎಸ್. ಕಪ್ ಹೆಸರಿನಲ್ಲಿ ಪಂದ್ಯಾವಳಿಗಳನ್ನು ಆಯೋಜಿಸಲಾಗಿದೆ ಎಂದು ತಿಳಿಸಿದರು.

ಪ್ರಭಾ ಮಲ್ಲಿಕಾರ್ಜುನ್ ಅಭಿಮಾನಿ ಬಳಗದಿಂದ ದಿನಾಂಕ 16ರ ಭಾನುವಾರ ಬೆಳಿಗ್ಗೆ 11 ಗಂಟೆಗೆ ಐಎಂಎ ಹಾಲ್‌ನಲ್ಲಿ ರಕ್ತದಾನ ಶಿಬಿರ ಹಮ್ಮಿಕೊಳ್ಳಲಾಗಿದೆ.

ಪತ್ರಿಕಾಗೋಷ್ಠಿಯಲ್ಲಿ ಅಯೂಬ್, ಕೆ.ಜಿ. ಶಿವಕುಮಾರ್, ಎಸ್.ಮಲ್ಲಿಕಾರ್ಜುನ್, ಡೋಲಿ ಚಂದ್ರು, ರಾಜು ಭಂಡಾರಿ, ಮಂಗಳಮ್ಮ, ಮಂಜುಳಮ್ಮ, ರಾಜೇಶ್ವರಿ, ಶುಭಮಂಗಳ, ದ್ರಾಕ್ಷಾಯಣಪ್ಪ, ಕವಿತಾ ಚಂದ್ರಶೇಖರ್ ಇತರರು ಉಪಸ್ಥಿತರಿದ್ದರು.



## ನಗರಕ್ಕೆ ಇಂದು ಪ್ರಿಯಾಂಕ ಜಾರಕಿಹೊಳಿ

ಸಂಸದರಾದ ಕು. ಪ್ರಿಯಾಂಕ ಜಾರಕಿಹೊಳಿ ಅವರು ಇಂದು ಬೆಳಿಗ್ಗೆ 10.30ಕ್ಕೆ ನಾಯಕ ವಿದ್ಯಾರ್ಥಿ ನಿಲಯಕ್ಕೆ ಭೇಟಿ ನೀಡಲಿದ್ದಾರೆ ಎಂದು ನಾಯಕ ಸಮಾಜದ ಅಧ್ಯಕ್ಷ ಬಿ. ವೀರಣ್ಣ ತಿಳಿಸಿದ್ದಾರೆ.

## ಸುರ್ಜೇವಾಲ ವಜಾಕ್ಕೆ ಆಗ್ರಹ

ದಾವಣಗೆರೆ, ಜೂ. 12 - ಫೈವ್ ಸ್ಟಾರ್ ಹೋಟೆಲ್‌ನಲ್ಲಿ ಕುಳಿತು ಕಾರ್ಯಕರ್ತರನ್ನು ದಬಾಯಿಸುವ ರಣದೀಪ್‌ಸಿಂಗ್ ಸುರ್ಜೆವಾಲಾ ಅವರಿಂದಲೇ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಸೋಲುವುದಕ್ಕೆ ಕಾರಣವಾಯಿತು ಎಂದು ಕೆಪಿಸಿಸಿ ಸದಸ್ಯ ಹೆಚ್. ದುಗ್ಗಪ್ಪ ಆರೋಪಿಸಿದ್ದಾರೆ.

ಕಳೆದ 10 ವರ್ಷಗಳಿಂದ ಕೇಂದ್ರ ಮತ್ತು ರಾಜ್ಯಗಳಲ್ಲಿ ಅಧಿಕಾರವಿಲ್ಲದೇ ನರೇಂದ್ರ ಮೋದಿಯವರ ಹವಾದಲ್ಲಿ ಸೋತಿದ್ದ ಕಾಂಗ್ರೆಸ್‌ಗೆ ರಾಹುಲ್ ಗಾಂಧಿಯವರು ಹಗಲಿರುಳು ಎನ್ನದೇ ಕನ್ಯಾಕುಮಾರಿಯಿಂದ ಕಾಶ್ಮೀರದ ವರೆಗೂ ಭಾರತ್ ಜೋಡೋ ಯಾತ್ರೆ ಕೈಗೊಂಡು ಪಕ್ಷಕ್ಕೆ ಸಂಜೀವಿನಿ ನೀಡಿದ್ದ ಪರಿಣಾಮವಾಗಿ ಕಾಂಗ್ರೆಸ್ ಈ ಬಾರಿ ಮತ್ತೆ ಹೆಚ್ಚು ಸ್ಥಾನ ಗಳಿಸಲು ಸಾಧ್ಯವಾಗಿದೆಯೇ ಹೊರತು, ಎಲ್ಲೋ ಕೂತು ಅಧಿಕಾರ ನಡೆಸುವವರಿಂದಲ್ಲ. ಸುರ್ಜೇವಾಲ ಅವರನ್ನು ಕರ್ನಾಟಕ ಎಐಸಿಸಿ ಉಸ್ತುವಾರಿ ಕಾರ್ಯದರ್ಶಿ ಸ್ಥಾನದಿಂದ ಕಿತ್ತುಹಾಕಬೇಕು ಎಂದು ಆಗ್ರಹಿಸಿದ್ದಾರೆ.

## ಮೂರನೇ ಬಾರಿ ಅರುಣಾಚಲ ಸಿಎಂ ಆಗಲಿರುವ ಪೇಮಾ ಖಂಡು



ಇಟಾನಗರ, ಜೂ. 12 – ಪೇಮಾ ಖಂಡು ಅವರು ಸತತ ಮೂರನೇ ಬಾರಿಗೆ ಅರುಣಾಚಲ ಪ್ರದೇಶದ ಮುಖ್ಯ ಮಂತ್ರಿಯಾಗಲಿದ್ದಾರೆ. ಅವರನ್ನು ಬಿಜೆಪಿ ಶಾಸಕಾಂಗ ಪಕ್ಷದ ನಾಯಕರಾಗಿ ಅವಿರೋಧವಾಗಿ ಆಯ್ಕೆ ಮಾಡಲಾಗಿದೆ. ಈ ಆಯ್ಕೆಯ ನಂತರ ಖಂಡು ಅವರು ರಾಜ್ಯಪಾಲ ಲೆಫ್ಟಿನೆಂಟ್ ಜನರಲ್ (ನಿವೃತ್ತ) ಕೆ.ಟಿ. ಪರ್ನಾಯಕ್ ಅವರನ್ನು ಭೇಟಿ ಮಾಡಿ ಸರ್ಕಾರ ರಚಿಸಲು ಅನುಮತಿ ಕೋರಿದ್ದಾರೆ. ಖಂಡು ಹಾಗೂ ಸಚಿವರು ಪ್ರಮಾಣ ವಚನ ಸ್ವೀಕರಿಸಲು ರಾಜ್ಯಪಾಲರು ಆಹ್ವಾನ ನೀಡಿದ್ದಾರೆ.

## ಗ್ರಾಮಾಂತರದಲ್ಲಿಂದು ವಿದ್ಯುತ್ ವ್ಯತ್ಯಯ

ಕುಕ್ಕವಾಡ, ಕೊಲ್ಕುಂಟೆ, ಗಿರಿಯಾಪುರ, ಕೈದಾಳೆ, ಹದಡಿ, ಕಲ್ಪಂಡೆ, ಲೋಕಿಕೆರೆ, ಬಲ್ಲೂರು, ಕನಗೊಂಡನಹಳ್ಳಿ, ಮತ್ತಿ, ನಾಗರಸನಹಳ್ಳಿ, ಹೂವಿನಮಡು ಗ್ರಾಮಗಳು ಹಾಗೂ ಸುತ್ತಮುತ್ತಲಿನ ಗ್ರಾಮಗಳು, ಶ್ಯಾಗಲೆ ವ್ಯಾಪ್ತಿಯ ಶ್ಯಾಗಲೆ, ಕಂದ್ಗಲ್ಲು, ಕೋಡಿಹಳ್ಳಿ, ಗೋಣಿವಾಡ ಹಾಗೂ ಸುತ್ತಮುತ್ತಲಿನ ಗ್ರಾಮಗಳು. ಆನಗೋಡು ವ್ಯಾಪ್ತಿಯ ಹನುಮನಹಳ್ಳಿ, ಕೊಗ್ಗನೂರು, ಹನುಮನಹಳ್ಳಿ, ಆನಗೋಡು, ಹೆಬ್ಬಾಳು, ನೀರ್ಥಡಿ, ಶಿವಪುರ, ಹಾಲುವರ್ತಿ, ಗಂಗನಕಟ್ಟೆ, ನೇರ್ಲಿಗಿ, ಚಿನ್ನಸಮುದ್ರ ಗ್ರಾಮಗಳು ಹಾಗೂ ಸುತ್ತಮುತ್ತಲಿನ ಗ್ರಾಮಗಳು. ಅತ್ತಿಗೆರೆ ವ್ಯಾಪ್ತಿಯ ಆರಾಧ್ಯ ಕೈಗಾರಿಕೆ, ದಿಂಡದಹಳ್ಳಿ, ನರಗನಹಳ್ಳಿ, ಮಾಯಕೊಂಡ, ಬೊಮ್ಮೆನಹಳ್ಳಿ, ಬಾವಿಹಾಳು, ಬುಳ್ಳಾಪುರ, ಕೊಡಗನೂರು, ನಲ್ಕುಂದ, ಬಸಾಪುರ, ಅಣಬೇರು ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 6 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

## ಹರಿಹರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಹರಿಹರದ ಶಿವಮೊಗ್ಗ ರಸ್ತೆ, ಬೈಪಾಸ್, ತರಳಬಾಳು ಬಡಾವಣೆ, ವಿದ್ಯಾನಗರ 'ಎ' ಬ್ಲಾಕ್, 'ಬಿ' ಬ್ಲಾಕ್, 'ಸಿ' ಬ್ಲಾಕ್, ಇಂದಿರಾ ನಗರ, ಪ್ರಶಾಂತ ನಗರ, ಕಾಳಿದಾಸ ನಗರ, ಬೆಂಕಿ ನಗರ, ಜೆ.ಸಿ. ಬಡಾವಣೆ, ದೇವಸ್ತಾನ ರಸ್ತೆ, ಮೂರ್ಕಲ್ ಕಾಂಪೌಂಡ್, ವೀರಭದ್ರೇಶ್ವರ ದೇವಸ್ಥಾನ ಸುತ್ತ ಮುತ್ತ, ಬಹಾರ್ ಮಕಾನ್, ವಿ.ಆರ್‌ಎಲ್ ರಸ್ತೆ, ರಾಮ ಮಂದಿರ, ಹಳ್ಳದಕೇರಿ, ಕೈಲಾಸ ನಗರ, ಗಂಗಾ ನಗರ, ತೆಗ್ಗಿನಕೆರೆ, ಆಂಜನೇಯ ಆಗ್ರೋಟೆಕ್, ದೋಸ್ತಾನ ರೈಸ್ ಮಿಲ್, ಟೆಂಪಲ್ ರೋಡ್, ಜಾಮೀಯ ಮಸೀದಿ, ಹಳೇ ಬಂಬೂಬಜಾರ್, ಹಳೇ ತಹಶೀಲ್ದಾರ್ ರೋಡ್, ಶಿಬಾರ ಸರ್ಕಲ್, ನಡವಲಪೇಟೆ ಮತ್ತು ಬೆಳ್ಳೂಡಿ ಶಾಖಾ ವ್ಯಾಪ್ತಿಯಲ್ಲಿನ ಬಡಾವಣೆಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೂ ವಿದ್ಯುತ್ ವ್ಯತ್ಯಯವಾಗಲಿದೆ.

## ನಗರದಲ್ಲಿ ನಾಳೆ ಕದಳಿ ವೇದಿಕೆಯಿಂದ ಪರಿಸರ ದಿನಾಚರಣೆ

ದಾವಣಗೆರೆ, ಜೂ. 12- ಶರಣ ಸಾಹಿತ್ಯ ಪರಿಷತ್ತಿನ ಕದಳಿ ಮಹಿಳಾ ವೇದಿಕೆಯ ಜಿಲ್ಲಾ ಘಟಕದಿಂದ 154ನೇ ಕದಳಿ ಕಮ್ಮಟದಲ್ಲಿ ವಚನಕಾರ ಶರಣ ಕುರುಬ ಗೊಲ್ಲಾಳೇಶ್ವರ ಸಂಸ್ಮರಣೆ ಪರಿಸರ ದಿನಾಚರಣೆ ಹಾಗೂ ದತ್ತಿ ಕಾರ್ಯಕ್ರಮವು ನಾಡಿದ್ದು ದಿನಾಂಕ 14ರ ಶುಕ್ರವಾರ ಮಧ್ಯಾಹ್ನ 3 ಗಂಟೆಗೆ ಸೇಂಟ್ ಜಾನ್ಸ್ ಇಂಗ್ಲಿಷ್ ಮೀಡಿಯಂ ಶಾಲೆಯಲ್ಲಿ ನಡೆಯಲಿದೆ.

ಕದಳಿ ಮಹಿಳಾ ವೇದಿಕೆಯ ಅಧ್ಯಕ್ಷರಾದ ಗಾಯತ್ರಿ ವಸ್ತ್ರದ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಸೇಂಟ್ ಜಾನ್ಸ್ ಶಾಲೆಯ ಟಿ.ಎಂ. ಉಮಾಪತಯ್ಯ ಮುಖ್ಯ ಅತಿಥಿಯಾಗಿ ಉಪಸ್ಥಿತರಿರುವರು.

ಲಿಂ. ಕೆ.ಜಿ. ಕಲ್ಲಪ್ಪ ಮತ್ತು ಲಿಂ. ಕೆ.ಜಿ. ಲೋಕೇಶ್ವರಮ್ಮ ದತ್ತಿ (ದಾನಿ -ಕೆ.ಜಿ. ಸದಾಶಿವಪ್ಪ ಮತ್ತು ಸಹೋದರರು) ಕಾರ್ಯಕ್ರಮ ನಡೆಯಲಿದೆ. ಸಮಾಜ ಸೇವಕರಾದ ಜಿ.ಎಂ. ರೂಪ 'ಶರಣರಲ್ಲಿ ಪರಿಸರ ಪ್ರಜ್ಞೆ' ವಿಷಯವಾಗಿ ದತ್ತಿ ಅನುಭಾವ ನೀಡುವರು. ಸೈಯದ್ ಆರೀಫ್ ಆರ್., ಪ್ರೀತಾ ಟಿ.ರೈ, ಪ್ರಮೀಳ ನಟರಾಜ್, ಕೆ.ಬಿ. ಪರಮೇಶ್ವರಪ್ಪ, ವಿನೋದ ಅಜಗಣ್ಣನವರ್, ಮಮತ ನಾಗರಾಜ್ ಕಾರ್ಯಕ್ರಮದಲ್ಲಿ ಉಪಸ್ಥಿತರಿರುವರು ಎಂದು ಜಿಲ್ಲಾ ಕಾರ್ಯದರ್ಶಿ ಚಂದ್ರಿಕಾ ಮಂಜುನಾಥ್ ತಿಳಿಸಿದ್ದಾರೆ.

## ಡಿ.ಇಎಲ್.ಇಡಿ ದಾಖಲಾತಿಗೆ ಅವಧಿ ವಿಸ್ತರಣೆ

ದಾವಣಗೆರೆ, ಜೂ.12- 2024 - 2025 ಸಾಲಿನ ಡಿ.ಇಎಲ್.ಇಡಿ ದಾಖಲಾತಿಗಾಗಿ ಈಗಾಗಲೇ ಆಫ್‌ಲೈನ್‌ನಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಪ್ರಸಕ್ತ ಸಾಲಿನಲ್ಲಿ ದ್ವಿತೀಯ ಪಿಯುಸಿ 3ನೇ ಹಂತದ ಪರೀಕ್ಷೆ ಫಲಿತಾಂಶ ಬರುವವರೆಗೆ ಪ್ರವೇಶಕ್ಕಾಗಿ ದಿನಾಂಕವನ್ನು ವಿಸ್ತರಿಸಲಾಗಿದ್ದು, ಆಸಕ್ತ ವಿದ್ಯಾರ್ಥಿಗಳು ಆಫ್‌ಲೈನ್ ಮೂಲಕ ಅರ್ಜಿಗಳನ್ನು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್), ದಾವಣಗೆರೆ ಸಲ್ಲಿಸಬೇಕು.

ಅರ್ಜಿಯನ್ನು HYPERLINK "http://www.schooleducation.karnataka.gov.in/" \t "_blank" WWW.schooleducation.karnataka.gov.in ನಲ್ಲಿ ಡೌನ್‌ಲೋಡ್ ಮಾಡಿಕೊಂಡು ನಿಗದಿತ ದಾಖಲೆಗಳು ಮತ್ತು ಡಿ.ಡಿ.ಯೊಂದಿಗೆ ನೋಡಲ್ ಕೇಂದ್ರವಾದ ಡಯಟ್ ಇಲ್ಲಿಗೆ ನಿಗದಿತ ದಿನಾಂಕದೊಳಗೆ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ದೂ.ಸಂ : ಕನ್ನಡ ಮಾಧ್ಯಮ 9164489972, 988030377, 9844401092, 08192-231156, ಉರ್ದು ಮಾಧ್ಯಮ 9164489972, 8867932439, 08192-231156 ಸಂಪರ್ಕಿಸಲು ಡಯಟ್ ಪ್ರಾಚಾರ್ಯರರು ಹಾಗೂ ಪದನಿಮಿತ್ತ ಉಪನಿರ್ದೇಶಕರಾದ ಗೀತಾ ತಿಳಿಸಿದ್ದಾರೆ.

## ಬಸವೇಶ್ವರ ಕಾನ್ವೆಂಟ್ ಮಾನ್ಯತೆ ಹಿಂದಕ್ಕೆ

ದಾವಣಗೆರೆ, ಜೂ.12- ನಗರದ ಕೆ.ಹೆಚ್.ಬಿ ಕಾಲೋನಿಯಲ್ಲಿರುವ ಶ್ರೀ ಬಸವೇಶ್ವರ ಕಾನ್ವೆಂಟ್ ಎಲ್.ಸಿ.ಎಸ್. 1 ರಿಂದ 8 ನೇ ತರಗತಿಯವರೆಗೆ ನೀಡಲಾಗಿದ್ದ ಮಾನ್ಯತೆಯನ್ನು ಹಿಂಪಡೆಲಾಗಿದೆ ಎಂದು ಶಾಲಾ ಶಿಕ್ಷಣ ಇಲಾಖೆಯ ಕ್ಷೇತ್ರ ಶಿಕ್ಷಣಾಧಿಕಾರಿ ತಿಳಿಸಿದ್ದಾರೆ.

ಶ್ರೀ ಬಸವೇಶ್ವರ ಕಾನ್ವೆಂಟ್‌ಗೆ ಸೇರಿದ ನಿವೇಶನದ ಭೂ ಪರಿವರ್ತನೆಯ ಆದೇಶವನ್ನು ಜಿಲ್ಲಾಧಿಕಾರಿಗಳು ರದ್ದುಪಡಿಸಿದ್ದರೂ ಸಹ ಇಲಾಖೆಗೆ ತಪ್ಪು ದಾಖಲೆ, ಮಾಹಿತಿ ನೀಡಿ ಮಾನ್ಯತೆ ನವೀಕರಣ ಮಾಡಿಸಿಕೊಂಡಿರುವುದನ್ನು ಗಂಭೀರವಾಗಿ ಪರಿಗಣಿಸಿ ಪ್ರಸ್ತುತ ಪ್ರಕರಣವು ನ್ಯಾಯಾಲಯದ ಹಂತದಲ್ಲಿರುವುದರಿಂದ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಶಿಕ್ಷಣಾಧಿಕಾರಿಗಳು ವಿವರಿಸಿದ್ದಾರೆ.

ಸಾರ್ವಜನಿಕರು ಹಾಗೂ ಪೋಷಕರು ಈ ಶಾಲೆಗೆ ಪ್ರಸಕ್ತ ಸಾಲಿಗೆ ಮಕ್ಕಳನ್ನು ದಾಖಲು ಮಾಡಬಾರದೆಂದು ಶಾಲಾ ಶಿಕ್ಷಣ ಇಲಾಖೆಯ ಕ್ಷೇತ್ರ ಶಿಕ್ಷಣಾಧಿಕಾರಿಗಳು ಕರೆ ನೀಡಿದ್ದಾರೆ.

## ಜಗಳೂರಿಗೆ ಇಂದು ಲೋಕಾಯುಕ್ತರ ಭೇಟಿ

ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ಇಂದು ಬೆಳಗ್ಗೆ 11 ರಿಂದ ಮಧ್ಯಾಹ್ನ 1 ರವರೆಗೆ ದಾವಣಗೆರೆ ವಿಭಾಗದ ಲೋಕಾಯುಕ್ತ ಪೊಲೀಸ್ ಅಧೀಕ್ಷಕರಾದ ಎಂ.ಎಸ್ ಕೌಲಾಪೂರೆ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಲಿದ್ದಾರೆ.

# ರೇಣುಕಾ ಸ್ವಾಮಿ ಹತ್ಯೆ : ಅಭಾವಿಮ ಜಿಲ್ಲಾ ಯುವ ಘಟಕದಿಂದ ಕ್ರಮಕ್ಕೆ ಆಗ್ರಹ



ದಾವಣಗೆರೆ, ಜೂ. 12 - ಸಾಮಾಜಿಕ ಜಾಲತಾಣದಲ್ಲಿ ಕಾಮೆಂಟ್ ಮಾಡಿದ್ದನೆಂದು ಚಿತ್ರದುರ್ಗದ ರೇಣುಕಾಸ್ವಾಮಿ ಎಂಬಾತನನ್ನು ಅಪಹರಿಸಿ, ಕೊಲೆ ಮಾಡಿ, ರಸ್ತೆ ಬದಿಯಲ್ಲಿ ಬಿಸಾಕಿ ಹೋಗಿರುವ ಚಿತ್ರ ನಟ ದರ್ಶನ್ ಅಭಿಮಾನಿಗಳು ಹಾಗೂ ಈ ಕೃತ್ಯದಲ್ಲಿ ಭಾಗಿಯಾಗಿರುವವರು ಅದೆಷ್ಟೇ ಶಕ್ತಿಶಾಲಿಗಳಾಗಿದ್ದರೂ ಕಾನೂನು ರೀತಿ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಜಿಲ್ಲಾ ಯುವ ಘಟಕ ಸರ್ಕಾರವನ್ನು ಒತ್ತಾಯಿಸಿದೆ.

ಅಲ್ಲದೇ, ಮೃತರ ಕುಟುಂಬಕ್ಕೆ ಸೂಕ್ತ ಪರಿಹಾರ ಒದಗಿಸಬೇಕೆಂದು ಜಿಲ್ಲಾಧಿಕಾರಿ ವೆಂಕಟೇಶ್ ಅವರನ್ನು ಇಂದು ಅವರ ಕಚೇರಿಯಲ್ಲಿ ಭೇಟಿ ಮಾಡಿ, ಅವರ ಮೂಲಕ ಸರ್ಕಾರಕ್ಕೆ ಸಲ್ಲಿಸಿರುವ ಮನವಿ ಪತ್ರದಲ್ಲಿ ಕೇಳಿಕೊಳ್ಳಲಾಗಿದೆ.

ಈ ಸಂದರ್ಭದಲ್ಲಿ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾ ಯುವ ಘಟಕ, ಕಾರ್ಯದರ್ಶಿ ಶಿವರತನ್, ಶಿವರಾಜ್ ಜೆ., ಅಜಿತ್ ಆಲೂರ್, ಸಂತೋಷ್ ಅಣಬೇರು, ಅನಿಲ್ ಬಸವರಾಜ್ ಮತ್ತಿತರರು ಹಾಜರಿದ್ದರು.

## ರೇಣುಕಾಸ್ವಾಮಿ ಹತ್ಯೆ ಖಂಡಿಸಿ ನಗರದಲ್ಲಿ ಇಂದು ವೀರಶೈವ ಸಮಾಜದಿಂದ ಪ್ರತಿಭಟನೆ

ಜಿಲ್ಲಾ ವೀರಶೈವ ಸಮಾಜದಿಂದ ಚಿತ್ರದುರ್ಗದ ರೇಣುಕಾಸ್ವಾಮಿ ಹತ್ಯೆ ಮಾಡಿರುವ ಎಲ್ಲಾ ಅಪರಾಧಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿ, ಇಂದು ಸಂಜೆ 4.30 ಗಂಟೆಗೆ ಮಹಾನಗರ ಪಾಲಿಕೆಯ ಗಾಂಧಿ ಪ್ರತಿಮೆಯ ಮುಂದೆ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ.

## ಉಜ್ಜಯಿನಿ ಜಗದ್ಗುರು ಖಂಡನೆ



ದಾವಣಗೆರೆ, ಜೂ. 12 - ಚಿತ್ರದುರ್ಗದ ರೇಣುಕಾಸ್ವಾಮಿ ಹತ್ಯೆಯನ್ನು ಉಜ್ಜಯಿನಿ ಪೀಠದ ಜಗದ್ಗುರು ಶ್ರೀ ಸಿದ್ಧಲಿಂಗ ರಾಜದೇಶೀಕೇಂದ್ರ ಶಿವಾಚಾರ್ಯ ಭಗವತ್ಪಾದರು ಖಂಡಿಸಿದ್ದಾರೆ.

ಸಾಮಾಜಿಕ ಜಾಲತಾಣದ ಅತಿಯಾದ ಬಳಕೆ ದುರಂತ ಅಂತ್ಯಕ್ಕೆ ಕಾರಣವಾಗುತ್ತಿದೆ. ಸಾರ್ವಜನಿಕ ಜೀವನ ದಲ್ಲಿರುವವರು ಸಮಾಜಕ್ಕೆ ಮಾದರಿಯಾಗುವಂತೆ ನಡೆದುಕೊಳ್ಳ ಬೇಕು. ಬದಲಾಗಿ ಮೃಗೀಯವಾಗಿ ನಡೆದುಕೊಂಡು ಕುಟುಂಬಕ್ಕೆ ಆಧಾರವಾಗಿದ್ದ ಯುವಕನ ಪ್ರಾಣವನ್ನೇ ಬಲಿ ತೆಗೆದುಕೊಂಡಿ ರುವುದು ಖಂಡನೀಯ.

ರೇಣುಕಾಸ್ವಾಮಿ ಕುಟುಂಬದವರು ಉಜ್ಜಯಿನಿ ಪೀಠದ ಭಕ್ತರಾಗಿದ್ದು, ದುಃಖ ಭರಿಸುವ ಶಕ್ತಿಯನ್ನು ಭಗವಂತ ನೀಡಲಿ ಎಂದು ಜಗದ್ಗುರುಗಳು ಸಾಂತ್ವನ ಹೇಳಿದ್ದಾರೆ.

## ಕಠಿಣ ಶಿಕ್ಷೆಯಾಗಲಿ



ದಾವಣಗೆರೆ, ಜೂ.12- ಚಿತ್ರದುರ್ಗದ ರೇಣುಕಾಸ್ವಾಮಿ ಹತ್ಯೆ ರಾಜ್ಯದಾದ್ಯಂತ ಪ್ರಜ್ಞಾವಂತ, ಹೃದಯವಂತರೇ ನಾಚಿ ತಲೆತಗ್ಗಿಸುವಂತಹ ಅಮಾನವೀಯ ಕೃತ್ಯವಾಗಿದೆ. ವ್ಯಕ್ತಿ ವ್ಯಕ್ತಿತ್ವವನ್ನೇ ಮರೆತು ಮೃಗದಂತೆ ಕ್ರೌರ್ಯತನ ತೋರಿರುವುದು ನಾಯಕತ್ವ ಅನ್ನುವ ಸ್ಥಾನವೇ ಬುಡಮೇಲಾದಂತಾಗಿದೆ. ಮನುಷ್ಯತ್ವವನ್ನೇ ಮರೆತು ಈ ಕೃತ್ಯವೆಸಗಿದವರು ಯಾರೇ ಆಗಲಿ ಅವರೆಲ್ಲರಿಗೂ ಕಾನೂನಾತ್ಮಕವಾಗಿ ಘೋರತರವಾದ ಕಠಿಣ ಶಿಕ್ಷೆಯಾಗಲಿ ಎಂದು ಶ್ರೀಗಳು ಒತ್ತಾಯಿಸಿದರು.

## ಹತ್ಯೆಗೈದವರಿಗೆ ಕಠಿಣ ಶಿಕ್ಷೆಗೆ ವೀರಶೈವ ಮಹಾಸಭಾ ಒತ್ತಾಯ

ಬೆಂಗಳೂರು, ಜೂ. 12 – ಚಿತ್ರದುರ್ಗದ ರೇಣುಕಸ್ವಾಮಿ ಅವರ ಹತ್ಯೆಯನ್ನು ಖಂಡಿಸಿರುವ ಅಖಿಲ ಭಾರತ ವೀರಶೈವ ಮಹಾಸಭಾ, ಈ ಕೃತ್ಯ ಎಸಗಿರುವವರಿಗೆ ಕಠಿಣ ಶಿಕ್ಷೆ ವಿಧಿಸುವಂತೆ ಒತ್ತಾಯಿಸಿದೆ.

ಈ ಬಗ್ಗೆ ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿರುವ ಮಹಾಸಭಾ, ಯಾವುದೇ ಒತ್ತಡ ಅಥವಾ ಪ್ರಭಾವಕ್ಕೆ ಒಳಗಾಗದೇ, ಆರೋಪಿ ಸ್ಥಾನದಲ್ಲಿರುವವರನ್ನು ರಕ್ಷಿಸದೇ, ಸರ್ಕಾರವು ಶ್ರೀಸಾಮಾನ್ಯನ ಜೊತೆಗೆ ನಿಲ್ಲುತ್ತದೆ ಎಂಬುದನ್ನು ಈ ಘಟನೆಯಲ್ಲಿ ತೋರಿಸಬೇಕಾಗಿದೆ ಎಂದು ಹೇಳಿದೆ.

ಈ ವಿಷಯದಲ್ಲಿ ನಿರ್ಲಕ್ಷ್ಯ ತೋರಿದಲ್ಲಿ ರಾಜ್ಯಾದ್ಯಂತ ಹೋರಾಟ ಮಾಡಲು ಮಹಾಸಭೆಯು ತೀರ್ಮಾನಿಸಬೇಕಾಗುತ್ತದೆ. ಈ ಘಟನೆಯಿಂದ ಸರ್ಕಾರ ಪ್ರಭಾವಿ ವ್ಯಕ್ತಿಗಳ ಪರ ನಿಲ್ಲದೇ ಮೃತನ ಕುಟುಂಬದ ಜೊತೆ ನಿಲ್ಲುವುದು ಆದ್ಯ ಕರ್ತವ್ಯವಾಗಿದೆ. ಆ ಕುಟುಂಬಕ್ಕೆ ಅಗತ್ಯ ನೆರವನ್ನು ನೀಡುವಂತೆ ಸರ್ಕಾರವನ್ನು ಮಹಾಸಭೆಯು ಒತ್ತಾಯಿಸುತ್ತದೆ ಎಂದೂ ಮಹಾಸಭಾ ಹೇಳಿದೆ.

ಆ ಕುಟುಂಬಕ್ಕೆ ಅಗತ್ಯ ನೆರವನ್ನು ನೀಡುವಂತೆ ಸರ್ಕಾರವನ್ನು ಮಹಾಸಭೆಯು ಒತ್ತಾಯಿಸುತ್ತದೆ. ಮಹಾಸಭೆಯು ರೇಣುಕಸ್ವಾಮಿಯವರ ಕುಟುಂಬದ ದುಃಖದಲ್ಲಿ ಭಾಗಿಯಾಗಿದ್ದು, ಅವರ ಕುಟುಂಬಕ್ಕೆ ನ್ಯಾಯ ದೊರಕಿಸಿ ಕೊಡಲು ಸದಾ ಸಿದ್ಧವಾಗಿರುತ್ತದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ರೇಣುಕಸ್ವಾಮಿ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ನಟ ದರ್ಶನ್ ಹಾಗೂ ಅವರ ಸಹಚರರನ್ನು ಪೊಲೀಸರು ಬಂಧಿಸಿ ಕ್ರಮ ತೆಗೆದುಕೊಳ್ಳುತ್ತಿದ್ದಾರೆ.

# ಲೋಕಸಭೆಯಲ್ಲಿ ಕಾಂಗ್ರೆಸ್‌ಗೆ ಜಯ : ಹರಕೆ ತೀರಿಸಿದ ವೀರಭದ್ರಸ್ವಾಮಿ

ದಾವಣಗೆರೆ, ಜೂ. 12 - ದಾವಣಗೆರೆ ಲೋಕಸಭಾ ಚುನಾವಣೆಯಲ್ಲಿ ಎರಡೂವರೆ ದಶಕಗಳ ಬಳಿಕ ಜಯ ಗಳಿಸಿದ ಹಿನ್ನೆಲೆಯಲ್ಲಿ ಕಾಂಗ್ರೆಸ್ ಮುಖಂಡ ವೀರಭದ್ರಸ್ವಾಮಿ ಮಟ್ಟಿಕಲ್ ಅವರು 108 ತೆಂಗಿನಕಾಯಿ ಒಡೆಯುವ ಮೂಲಕ ಹಳೇಪೇಟೆಯ ಶ್ರೀ ವೀರಭದ್ರಸ್ವಾಮಿ ದೇವಸ್ಥಾನದಲ್ಲಿ ಹರಕೆ ತೀರಿಸಿದರು.



ಈ ವೇಳೆ ಮಾತನಾಡಿದ ವೀರಭದ್ರಸ್ವಾಮಿ ಅವರು, ಪ್ರಭಾ ಗೆಲುವಿಗೆ ಪ್ರಾರ್ಥಿಸಿ, ಕಳೆದ ಏಪ್ರಿಲ್ 30ರಂದು ಹಳೇಪೇಟೆಯ ಶ್ರೀ ಕೊಟ್ಟೂರೇಶ್ವರ ದೇವಸ್ಥಾನದಿಂದ ಹೊರಟು ಶ್ರೀ ವೀರಭದ್ರೇಶ್ವರ ದೇವಸ್ಥಾನದವರೆಗೆ ಗುಗ್ಗಳದೊಂದಿಗೆ ದೀಡು ನಮಸ್ಕಾರ ಸೇವೆ ಸಲ್ಲಿಸಿದ್ದೆ. ಬಳಿಕ ಬಾಯಿಗೆ ಶಸ್ತ್ರ, ನಾಲಿಗೆಗೆ 108 ಶಿವದಾರ ಧರಿಸಿ ಶ್ರೀ ವೀರಭದ್ರಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿದ್ದೆ. ಈ ಹಿಂದೆ ಬಿಜೆಪಿ ಗೆಲ್ಲಲೆಂದು ಪ್ರಾರ್ಥಿಸಿ, ನಾನೇ ಹರಕೆ ಹೊತ್ತು ತೀರಿಸಿದ್ದೆ. ಆದರೆ ಸಿದ್ದೇಶ್ವರರ ದುರಾಡಳಿತಕ್ಕೆ ಬೇಸತ್ತು, ಈ ಬಾರಿ ಕಾಂಗ್ರೆಸ್ ಅಭ್ಯರ್ಥಿ ಗೆಲುವಿಗೆ ಶ್ರಮಿಸಿದ್ದೇನೆ. ಬಿಜೆಪಿ ಸೋಲಲು ಸಿದ್ದೇಶ್ವರರೇ ಕಾರಣ ಎಂದು ಹೇಳಿದರು.

ಜಿಲ್ಲೆಯಲ್ಲಿ ಹಿಂದುತ್ವದ ಪರ ಹೋರಾಟ ಮಾಡಿ ಜೈಲಿಗೆ ಹೋಗಿ ಬಂದಿದ್ದೇನೆ. ನನ್ನಂತೆ ಸಾವಿರಾರು ಜನರು ಪಕ್ಷಕ್ಕಾಗಿ ಹಗಲಿರುಳು ದುಡಿದಿದ್ದರು. ಅವರೆಲ್ಲರನ್ನೂ ತಿರಸ್ಕಾರ ಮನೋಭಾವದಿಂದ ನೋಡಿದ ಕಾರಣ ಸಿದ್ದೇಶ್ವರ ಅವರ ಪತ್ನಿ ಗಾಯತ್ರಿ ಸಿದ್ದೇಶ್ವರ ಅವರು ಸೋಲು ಕಾಣಬೇಕಾಯಿತು. ಇದು ಸಿದ್ದೇಶ್ವರರ ಕುಟುಂಬದ ಸೋಲು ಅಷ್ಟೇ. ಬಿಜೆಪಿಯ ಸೋಲಲ್ಲ ಎಂದು ತಿಳಿಸಿದರು.

ಹರಕೆ ತೀರಿಸುವ ವೇಳೆ ಕಾಂಗ್ರೆಸ್ ಮುಖಂಡರಾದ ಕಕ್ಕರಗೊಳ್ಳ ಕಲ್ಲಿಂಗಪ್ಪ, ಆರ್ರೈಕೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಡಾ. ರವಿಕುಮಾರ್, ಶಶಿ ಶೇಖರ್, ಅಣಜಿ ಬಸವರಾಜ್, ಕರೂರು ಗಣೇಶ್, ಡಿ. ಕೆ. ರಾಜೇಂದ್ರ, ಸಿರಿಗೆರೆ ಬಸವರಾಜ್, ಅಣಜಿ ಪ್ರಶಾಂತ್, ಕಾಯಿಪೇಟೆ ಹಾಲೇಶಣ್ಣ, ಜಯಣ್ಣ ಮತ್ತಿತರರು ಪಾಲ್ಗೊಂಡಿದ್ದರು.


**ನಗರಸಭಾ ಕಾರ್ಯಾಲಯ, ಹರಿಹರ–577601.**

ಫೋ:08192–244266 ಫ್ಯಾಕ್ಸ್:08192–241024

**E-mail ID no:itstaff_ulb_harihara@yahoo.com**

ನಂ.ನಸಹ/ತಾಂತ್ರಿಕ/ಶೇ.24.10&5/ಸಿಆರ್–01/2023–24

ದಿನಾಂಕ: 11.06.2024

**ಟೆಂಡರ್ ಪ್ರಕಟಣೆ**


2023–24ನೇ ಸಾಲಿನ ಶೇ.24.10ರ ಸಾಮಾನ್ಯ ನಿಧಿಯ ಮತ್ತು ಶೇ.5ರ ಸಾಮಾನ್ಯ ನಿಧಿಯ ಕಾರ್ಯಕ್ರಮಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದೇಶ–1999–2000ರ Act 2000ರ ನಿಯಮದಂತೆ ಸ್ಟ್ಯಾಂಡರ್ಡ್ ಬಿಡ್ ಡಾಕ್ಯುಮೆಂಟ್ ಕೆಡಬ್ಲ್ಯೂ–1/2& 4ರ ನಿಯಮದನ್ವಯ ಈ ಕೆಳಗಿನ ಕಾರ್ಯಕ್ರಮಗಳ ಇಂಡೆಂಟ್ ನಂಬರ್‌ಗಳ ಕಾರ್ಯಕ್ರಮಗಳನ್ನು ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರಿಂದ/ಸರಬರಾಜುದಾರರಿಂದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದ್ದು ಇಚ್ಛೆಯುಳ್ಳ ಗುತ್ತಿಗೆದಾರರಿಂದ/ಸರಬರಾಜುದಾರರಿಂದ ಈ ಕೆಳಗಿನ ಕಾರ್ಯಕ್ರಮಗಳಿಗೆ ತಮ್ಮ ದರಗಳನ್ನು e-procurement ಮುಖಾಂತರ ಸಲ್ಲಿಸಲು ಕೋರಿದೆ. ಗುತ್ತಿಗೆದಾರರು/ಸರಬರಾಜುದಾರರು ತಮಗೆ ಬೇಕಾದ ಟೆಂಡರ್ ದಾಖಲೆಗಳನ್ನು http://kppp.karnataka.gov.inವೆಬ್‌ಸೈಟ್ ಮೂಲಕ ಪಡೆದುಕೊಂಡು ಭರ್ತಿ ಮಾಡಿದ ಟೆಂಡರ್‌ಗಳನ್ನು e-procurement ವೆಬ್‌ಸೈಟ್ ಮೂಲಕ ಸಲ್ಲಿಸಬಹುದು ಹಾಗೂ ಹೆಚ್ಚಿನ ಮಾಹಿತಿಯನ್ನು ತಾಂತ್ರಿಕ ಶಾಖೆ ನಗರಸಭೆ, ಹರಿಹರ ಇವರಿಂದ ಪಡೆಯಬಹುದಾಗಿದೆ.

(1) ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಮುಖಾಂತರ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 24.06.2024 ರಂದು ಸಾಯಂಕಾಲ 05–00 ಗಂಟೆಯವರೆಗೆ (2) ಇ–ಪ್ರೊಕ್ಯೂರ್‌ಮೆಂಟ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 26.06.2024 ರಂದು ಬೆಳಿಗ್ಗೆ 11–30 ಗಂಟೆಗೆ (1) DMA/2023-24/IND 1625, (2) DMA/2023-24/IND 1622

ಸಹಿ/–ಪೌರಾಯುಕ್ತರು, ನಗರಸಭೆ, ಹರಿಹರ.

ಸಹಿ/–ಆಡಳಿತಾಧಿಕಾರಿಗಳು ನಗರಸಭೆ, ಹರಿಹರ.

ವಾಸಾಇ/ಡಿವಿಜಿ/47/ಕೆಎಸ್ಎಂಸಿಎ/2024–25




## ಜೂನ್ ಮಾಹೆಗೆ ಪಡಿತರ ಹಂಚಿಕೆ

ದಾವಣಗೆರೆ, ಜೂ.12- ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯಡಿ ಜಿಲ್ಲೆಯಲ್ಲಿನ ಪಡಿತರ ಚೀಟಿದಾರರಿಗೆ ಜೂನ್ ಮಾಹೆಗೆ ಅನ್ವಯವಾಗುವಂತೆ ಪಡಿತರ ಧಾನ್ಯ ಹಂಚಿಕೆ ಮಾಡಲಾಗಿದೆ. ಅಂತ್ಯೋದಯ ಪಡಿತರ ಚೀಟಿದಾರರಿಗೆ ಪ್ರತಿ ಕಾರ್ಡ್‌ಗೆ 21 ಕೆ.ಜಿ ಅಕ್ಕಿ, ರಾಗಿ ಪ್ರತಿ ಕಾರ್ಡ್‌ಗೆ 14 ಕೆ.ಜಿ, ಆದ್ಯತಾ ಹಾಗೂ ಬಿ.ಪಿ.ಎಲ್ ಪಡಿತರ ಚೀಟಿದಾರರಿಗೆ 3 ಕೆ.ಜಿ ಅಕ್ಕಿ, ರಾಗಿ 2 ಕೆ.ಜಿ ಉಚಿತವಾಗಿ ವಿತರಿಸಲಾಗುತ್ತದೆ. ಸರ್ಕಾರದ ಗ್ಯಾರಂಟಿ ಯೋಜನೆಯಡಿ ಪಡಿತರ ಚೀಟಿದಾರರಿಗೆ ನೇರ ನಗದು ವರ್ಗಾವಣೆ ಮಾಡುತ್ತಿದ್ದು, ಯಾವುದೇ ತಾಂತ್ರಿಕ ಸಮಸ್ಯೆಗಳಿದ್ದಲ್ಲಿ ಹತ್ತಿರದ ನ್ಯಾಯಬೆಲೆ ಅಂಗಡಿಗೆ ಭೇಟಿ ನೀಡಿ ಪರಿಹರಿಸಿಕೊಳ್ಳಬಹುದೆಂದು ತಹಶೀಲ್ದಾರ್ ಡಾ.ಎಂ.ಬಿ.ಅಶ್ವತ್ಥ್ ತಿಳಿಸಿದ್ದಾರೆ.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಆವರಗೆರೆ, ಉತ್ತಮ ಲೇಔಟ್, ಪೊಲೀಸ್ ಲೇಔಟ್, ಬಾಡ ಕ್ರಾಸ್, ಆಂಜನೇಯ ಕಾಟನ್ ಮಿಲ್, ಎಚ್. ಕಲಪನಹಳ್ಳಿ, ಹೊನ್ನೂರು, ಹೊನ್ನೂರು ಗೊಲ್ಲರಹಟ್ಟಿ, ಮಲ್ಲಶೆಟ್ಟಿಹಳ್ಳಿ, ಕರಿಲಕ್ಕನಹಳ್ಳಿ, ಚಟ್ಟೋಬನಹಳ್ಳಿ ಮತ್ತು ಸುತ್ತಮುತ್ತ ಇಂದು ಬೆಳಿಗ್ಗೆ 10 ರಿಂದ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

## ನಗರಪಾಲಿಕೆ ಆಸ್ತಿ ತೆರಿಗೆ ಪಾವತಿಸಿ ಶೇ.5ರ ರಿಯಾಯಿತಿ

ದಾವಣಗೆರೆ, ಜೂ. 12 - ಪ್ರಸಕ್ತ ಸಾಲಿನ ಆಸ್ತಿ ತೆರಿಗೆ ಪಾವತಿಸಲು ಏಪ್ರಿಲ್ 2024 ರಿಂದ ಪ್ರಾರಂಭವಾಗಿದ್ದು ಸಕಾಲದಲ್ಲಿ ಪಾವತಿಸಿದವರಿಗೆ ಆಸ್ತಿ ತೆರಿಗೆಯ ಮೇಲೆ ಶೇ.5 ರಷ್ಟು ರಿಯಾಯಿತಿ ನೀಡುವ ಸೌಲಭ್ಯವನ್ನು ಜುಲೈ 31 ರವರೆಗೆ ವಿಸ್ತರಿಸಲಾಗಿದೆ. **ಆಸ್ತಿ ತೆರಿಗೆ ಪಾವತಿಸಿಕೊಳ್ಳುವ ಸ್ಥಳ:** ವಲಯ ಕಚೇರಿ-1, ಮಹಾನಗರಪಾಲಿಕೆ, ರಾಜೀವ್‌ಗಾಂಧಿ ಬಡಾವಣೆ, ಬೂದಾಳ್ ರಸ್ತೆ ದಾವಣಗೆರೆ. ವಲಯ ಕಚೇರಿ-2, ಮಹಾನಗರಪಾಲಿಕೆ, ಲೋಕಿಕೆರೆ ರಸ್ತೆ, ಟಿವಿ ಸ್ಟೇಷನ್ ಎದುರು ದಾವಣಗೆರೆ, ವಲಯ ಕಚೇರಿ-3, ಮಹಾನಗರಪಾಲಿಕೆ, ಆಶ್ರಯ ಆಸ್ಪತ್ರೆ ಪಕ್ಕ ದಾವಣಗೆರೆ, ಸಾರ್ವಜನಿಕರು ವೆಬ್ ಸೈಟ್ HYPERLINK "http://davanagerecitycorp.org/" \t "_blank" http://davanagerecitycorp.org ಲಿಂಕ್‌ನ್ನು ಉಪಯೋಗಿಸಿಕೊಂಡು ಮತ್ತು ಗೂಗಲ್ ಪೇ, ಫೋನ್ ಪೇ, ನಗದು, ಚೆಕ್ ಮುಖಾಂತರವೂ ಸಹ ಆಸ್ತಿ ತೆರಿಗೆ ಪಾವತಿಸಬಹುದೆಂದು ಪಾಲಿಕೆ ಆಯುಕ್ತರಾದ ರೇಣುಕಾ ತಿಳಿಸಿದ್ದಾರೆ.
















KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas